ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಆಗಸ್ಟ್ 10, 2022

ಸಂಪುಟ : 49 ಸಂಚಿಕೆ : 88 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

## ಹದಡಿ ಕೆರೆ ಏರಿ ದುರಸ್ತಿಗೆ 1.70 ಕೋಟಿ

ದಾವಣಗೆರೆ, ಆ. 9- ಹದಡಿ ಕೆರೆ ಏರಿ ದುರಸ್ತಿಗೆ ಸರ್ಕಾರ 1.70 ಕೋಟಿ ಅನು ದಾನ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ಅಧಿಕಾರಿಗಳೊಂದಿಗೆ ಕೆರೆ ಏರಿ ವೀಕ್ಷಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೆರೆ ಏರಿ ಮಳೆಯಿಂದಾಗಿ ಕುಸಿತ ಕಂಡಿದ್ದು, ಮುಂದೆ ಈ ರೀತಿ ಆಗದಂತೆ ಏರಿ ನಿರ್ಮಿಸಲಾಗುವುದು ಎಂದು ಹೇಳಿದರು. ಕೆರೆ ಏರಿ ಕುಸಿದ ಸುದ್ದಿ ತಿಳಿದಾಕ್ಷಣವೇ ಅಧಿಕಾರಿಗಳೊಂದಿಗೆ ಚರ್ಚಿಸಿ, ಸರ್ಕಾರದಿಂದ 1.70 ಕೋಟಿ ರೂ. ಮಂಜೂರು ಮಾಡಿಸಲಾಗಿದೆ. ಮಳೆಗಾಲ ಮುಗಿದ ನಂತರ ಕಾಮಗಾರಿ ಕೈಗೆತ್ತಿಕೊಳ್ಳ ಲಾಗುವುದು ಎಂದು ಹೇಳಿದರು.

ಪ್ರಸ್ತುತ ಕೆರೆ ಏರಿ ರಸ್ತೆಯಲ್ಲಿ ತಾತ್ಕಾಲಿಕವಾಗಿ 10 ಲೋಡ್ ಗ್ರ್ಯಾವೆಲ್ ಹಾಕಿಸಿ ದುರಸ್ತಿ ಪಡಿಸಲಾಗುವುದು. ಇನ್ನೂ ರೈತರು ಹದಡಿ ಕೆರೆಗೆ ತಡೆ ಗೋಡೆ ನಿರ್ಮಿಸಬೇಕು ಎಂಬ ಒತ್ತಾಯ ಇದೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

**ಜಿಲ್ಲೆಗೆ 15 ಕೋಟಿ ರೂ. ಬಿಡುಗಡೆ:** ಅತಿವೃಷ್ಟಿ ಯಿಂದಾದ ಹಾನಿ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ 200 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ಜಿಲ್ಲೆಗೆ 15 ಕೋಟಿ ರೂ. ಬಿಡುಗಡೆ ಮಾಡ ಲಾಗಿದೆ ಎಂದು ಸಚಿವರು ಹೇಳಿದರು. ಹೆಚ್ಚಿನ ಅನು ದಾನಬೇಕೆಂದು ಜಿಲ್ಲಾಧಿಕಾರಿ ಪ್ರಸ್ತಾವನೆ ಸಲ್ಲಿಸಿದರೆ ಅದನ್ನು ಕೊಡಿಸಲು ಪ್ರಯತ್ನಿಸುವುದಾಗಿ ಹೇಳಿದರು.

**ಬಂದವರೆಲ್ಲಾ ಓಟು ಹಾಕಲ್ಲ:** ಸಿದ್ದರಾಮಯ್ಯ ಅಮೃತ ಮಹೋತ್ಸವಕ್ಕೆ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಪಕ್ಷದವರು ಬಂದಿದ್ದಾರೆ. ಅಲ್ಲಿಗೆ ಹೋದವರೆಲ್ಲಾ ಕಾಂಗ್ರೆಸ್‌ಗೆ ವೋಟು ಹಾಕುವುದಿಲ್ಲ ಎಂದು ಸಚಿವ ಭೈರತಿ ಹೇಳಿದರು. ಬಿಜೆಪಿ ರಾಷ್ಟ್ರೀಯ ಪಕ್ಷವಾಗಿದ್ದು, ಕೋಟ್ಯಾಂತರ ಜನ (3ನೇ ಪುಟಕ್ಕೆ)

## ಅಧಿಕಾರಿಗಳಿಗೆ ಪೀಡನೆ

### ಗುಜರಾತ್ : 9 ಜನರು ಆರ್.ಟಿ.ಐ. ಕಪ್ಪು ಪಟ್ಟಿಗೆ

ಅಹಮದಾಬಾದ್, ಆ. 9 – ಅಭೂತಪೂರ್ವ ಕ್ರಮ ತೆಗೆದುಕೊಂಡಿರುವ ಗುಜರಾತ್ ಮಾಹಿತಿ ಆಯೋಗ, ಪದೇ ಪದೇ ಮಾಹಿತಿ ಹಕ್ಕು ಅರ್ಜಿಗಳನ್ನು ದಾಖಲಿಸಿ ಅಧಿಕಾರಿಗಳನ್ನು ಪೀಡಿಸಿದ ಕಾರಣಕ್ಕಾಗಿ ಒಂಬತ್ತು ಜನರನ್ನು ಕಪ್ಪು ಪಟ್ಟಿಗೆ (3ನೇ ಪುಟಕ್ಕೆ)

## ಬಿಜೆಪಿಗೆ ಟಾಟಾ ಆರ್‌ಜೆಡಿ ಜೊತೆ ಸರ್ಕಾರ

ಪಾಟ್ನಾ, ಆ. 9 – ಬಿಜೆಪಿ ಜೊತೆಗಿನ ಮೈತ್ರಿ ಕಡಿದುಕೊಂಡಿರುವ ಜೆಡಿಯು ನಾಯಕ ನಿತೀಶ್ ಕುಮಾರ್, ಆರ್.ಜೆ.ಡಿ. ಜೊತೆ ಕೈ ಜೋಡಿಸಿದ್ದಾರೆ. ಹೊಸ ಮೈತ್ರಿಕೂಟದೊಂದಿಗೆ ನಿತೀಶ್ 8ನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಮಂಗಳವಾರ ರಾಜ್ಯಪಾಲ ಫಗು ಚೌಹಾಣ್ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ಕುಮಾರ್, ಮಹಾಘಟಬಂಧನದಿಂದ ಮುಖ್ಯಮಂತ್ರಿಯಾಗಲು (3ನೇ ಪುಟಕ್ಕೆ)

## ಪ್ರಥಮ ಪುಣ್ಯಸ್ಮರಣೆ



ದಿ. ವೇಮೂರಿ ವೆಂಕಟರತ್ನಂ
ನೆಹರೂ ಕ್ಯಾಂಪ್
ಜನನ : 12.10.1939 ಮರಣ : 21.08.2021

ನೀವು ನಮ್ಮನ್ನಗಲಿ
ಒಂದು ವರ್ಷವಾಯಿತು.
ನಿಮ್ಮ ನೆನಪು,
ಪ್ರೀತಿ - ವಾತ್ಸಲ್ಯ, ಸದಾ
ನಮ್ಮಲ್ಲಿ ಹಚ್ಚ ಹಸಿರಾಗಿದೆ.
ನಿಮ್ಮ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿರುವ,

ಪತ್ನಿ, ಮಕ್ಕಳು, ಅಳಿಯ, ಮೊಮ್ಮಕ್ಕಳು, ಮರಿಮೊಮ್ಮಕ್ಕಳು
ಹಾಗೂ ಬಂಧು-ಮಿತ್ರರು. ಮೊ. 90199-11991

### ಪ್ರಥಮ ಪುಣ್ಯಸ್ಮರಣೆ

ಕಾರ್ಯಕ್ರಮವನ್ನು ಇಂದು ದಿನಾಂಕ 10.08.2022ರ
ಬುಧವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆಯ ಡಾ. ಶ್ಯಾಮಸುಂದರ ಶೆಟ್ಟಿ
ಬಂಟರ ಭವನದಲ್ಲಿ ಏರ್ಪಡಿಸಲಾಗಿದೆ. ಬಂಧು-ಮಿತ್ರರು ಆಗಮಿಸಿ
ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

## ವಿದೇಶ ಪ್ರಯಾಣ ಶುಭ ಹಾರೈಕೆ




ಅಮೇರಿಕ ದೇಶದ ನ್ಯೂಯಾರ್ಕ್‌ನಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ
ದಿನಾಂಕ 10.8.2022ರಂದು ಪ್ರಯಾಣ ಮಾಡುತ್ತಿರುವ
ಶ್ರೀ ಸಿದ್ದೇಶ್ವರ ಸಿಮೆಂಟ್ & ಸ್ಟೀಲ್ಸ್ ಮಾಲೀಕರಾದ
ಶ್ರೀಮತಿ ನಾಗಮಣಿ ಮತ್ತು ಬಿ.ಟಿ. ನಾಗರಾಜ್ ಇವರ ಪುತ್ರಿ
**ಕು|| ಬಿ.ಎನ್. ಹರ್ಷಿತ**
ಇವರ ಪ್ರಯಾಣ ಸುಖಕರವಾಗಿರಲೆಂದು ಶುಭ ಕೋರುವವರು :

ಶ್ರೀಮತಿ ಪವಿತ್ರ ಮತ್ತು ಶ್ರೀ ಡಿಂಡಿಮ ದುಬೈ.
ಶ್ರೀಮತಿ ಅಕ್ಕಮಹಾದೇವಿ ಮತ್ತು ಶ್ರೀ ಜಿ.ಸಿ ಬಸವರಾಜಪ್ಪ ಗುಮ್ಮನೂರು
ಉಪಾಧ್ಯಕ್ಷರು, ಗುಡಾಳ್ ಗ್ರಾಮ ಪಂಚಾಯಿತಿ.
ಶ್ರೀಮತಿ ಉಷಾ ಮತ್ತು ಶ್ರೀ ಪ್ರಕಾಶ್ ಗಂಗನಕಟ್ಟೆ
ಶ್ರೀ ಸಿದ್ದೇಶ್ವರ ಆಗ್ರೋ ಏಜೆನ್ಸೀಸ್. ದಾವಣಗೆರೆ.
ಶ್ರೀಮತಿ ಆಶಾ ಮತ್ತು ನಂದಕುಮಾರ್ ಅತ್ತಿಗೆರೆ.
ಶ್ರೀಮತಿ ಲತಾ ಮತ್ತು ಶ್ರೀ ಸುಂದರೇಶ್‌ಗೌಡ ಗುಮ್ಮನೂರು.
ಚಿ|| ಆಕಾಶ್, ಕು|| ಐಶ್ವರ್ಯ, ಕು|| ಇನೀ ಡಿಂಡಿಮ
ಕು|| ರೋಹಿಣಿ, ಕು|| ಕುಶಲಾ,
ಪುಟಾಣಿ ಮೋನ್ವಿತಾ, ಪ್ರಕುಲ್ ಗೌಡ
ಮತ್ತು ಕುಟುಂಬ ವರ್ಗದವರು.

## ಸವಿನೆನಪು



ಜನನ :
30.04.1938

ನಿಧನ :
10.08.2019

ಉಸಿರು ಹೋದರೂ ಹೆಸರು ಉಳಿಸಿದ
**ಲಿಂ. ಡಾ. ಎಸ್.ಹೆಚ್. ಪೂಜಾರ್**
ಮಕ್ಕಳ ತಜ್ಞರು

ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ : ಶ್ರೀಮತಿ ರತ್ನ ಪೂಜಾರ್
ಪುತ್ರರು - ಸೊಸೆಯಂದಿರು :
ಡಾ. ಮಧು ಪೂಜಾರ್ ಮತ್ತು ಡಾ. ಸ್ನೇಹ ಮಧು
ಡಾ. ಮನೋಜ್ ಪೂಜಾರ್ ಮತ್ತು ಶ್ರೀಮತಿ ಶೃತಿ ಮನೋಜ್
ಮೊಮ್ಮಕ್ಕಳು ಹಾಗೂ ಬಂಧು - ಮಿತ್ರರು

ಸಿಬ್ಬಂದಿ ವರ್ಗದವರು :
ಪೂಜಾ ಮಕ್ಕಳ ಆಸ್ಪತ್ರೆ ಮತ್ತು ಪೂಜಾ ಹೆಲ್ತ್‌ಕೇರ್
ಪಿ.ಜೆ. ಬಡಾವಣೆ, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 09.08.2022ರ ಮಂಗಳವಾರ ನಿಧನರಾದ
**ಶ್ರೀ ಎಸ್.ಜಿ. ಲೋಕೇಶ್ವರಪ್ಪನವರಿಗೆ**
ಭಾವಪೂರ್ಣ ಶ್ರದ್ಧಾಂಜಲಿ. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.

- ❒ ಎಸ್. ಜಿ. ವೇದಮೂರ್ತಿ ಶಾಮನೂರು, ಕಾಂಗ್ರೆಸ್ ಮುಖಂಡರು
- ❒ ಶ್ರೀಮತಿ ಬಸಮ್ಮ ದಿ. ಎಸ್.ಜಿ. ಪರಮೇಶ್ವರಪ್ಪ
- ❒ ಶ್ರೀಮತಿ ಮಮತಾ ಎಸ್.ಜಿ. ವೇದಮೂರ್ತಿ, ಎಸ್.ಜಿ. ಚಿನ್ನು, ಎಸ್.ಜಿ. ಸಮ್ಯಕ್
- ❒ ಶ್ರೀಮತಿ ಎಸ್.ಜಿ. ಗಿರಿಜಮ್ಮ ದಿ. ಹನುಮಂತಪ್ಪ ಮತ್ತು ಮಕ್ಕಳು ಶಾಮನೂರು
- ❒ ಎಸ್.ಜಿ. ಜಯಶೀಲಾ, ಡಾ. ಗಿರೀಶ್ ಮತ್ತು ಮಕ್ಕಳು, ಅಜ್ಜಿಹಳ್ಳಿ

**ಶಾಮನೂರು ಗೌಡ್ರ ವಂಶಸ್ಥರು ಹಾಗೂ ಬಂಧು-ಬಳಗ**

## ಶಾಮನೂರು ಸಣ್ಣಗೌಡ್ರ ಲೋಕೇಶ್ವರಪ್ಪನವರು ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ
**ಶ್ರೀ ಎಸ್. ಜಿ. ಲೋಕೇಶ್ವರಪ್ಪನವರು**
ದಿನಾಂಕ : 09.08.2022ರ ಮಂಗಳವಾರ ಮಧ್ಯಾಹ್ನ 1.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 10.08.2022ನೇ ಬುಧವಾರ ಮಧ್ಯಾಹ್ನ 12ಕ್ಕೆ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ :

ಸಣ್ಣಗೌಡ್ರ ಶ್ರೀಮತಿ ಗೌರಮ್ಮ ಲೋಕೇಶ್ವರಪ್ಪ, ನಗರಸಭೆ ಮಾಜಿ ಉಪಾಧ್ಯಕ್ಷರು, ದಾವಣಗೆರೆ.
ಶಾಮನೂರು ಶಾಪೆ ಮತ್ತು ಎಸ್.ಜಿ.ಎಲ್. ಇನ್‌ಫೋಟೆಕ್, ದಾವಣಗೆರೆ.
ಮೊಬೈಲ್ : 98803 10567, 99644 34834

# ಗಾಣಿಗ ಸಮುದಾಯಕ್ಕೆ 2ಎ ಮೀಸಲಾತಿಗೆ ಒತ್ತಾಯಿಸಿ ಶೀಘ್ರದಲ್ಲೇ ನಿಯೋಗ



**ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ವಿಜಯಪುರ ಗಾಣಿಗ ಗುರುಪೀಠದ ಶ್ರೀ ಜಯ ಬಸವಕುಮಾರ ಸ್ವಾಮೀಜಿ**

ಹರಪನಹಳ್ಳಿ, ಆ. 9 - ರಾಜ್ಯದ ಎಲ್ಲಾ ಗಾಣಿಗರಿಗೆ 2ಎ ಮೀಸಲಾತಿ ಸಿಗಬೇಕು ಎಂದು ಒತ್ತಾಯಿಸಿ, ಶೀಘ್ರದಲ್ಲೇ ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಲಾಗುವುದು ಎಂದು ವಿಜಯಪುರ ಗಾಣಿಗ ಗುರುಪೀಠದ ಶ್ರೀ ಜಯ ಬಸವಕುಮಾರ ಸ್ವಾಮೀಜಿ ಹೇಳಿದರು.

ಪಟ್ಟಣದ ಮಹೇಶ ಪಬ್ಲಿಕ್ ಸ್ಕೂಲ್‌ನಲ್ಲಿ ಹರಪನಹಳ್ಳಿ ತಾಲ್ಲೂಕು ಗಾಣಿಗರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕೇಂದ್ರ ಸರ್ಕಾರವು ಲಿಂಗಾಯಿತ ಸಮುದಾಯದ ಎಲ್ಲಾ ಒಳ ಪಂಗಡದವರಿಗೂ ಒಬಿಸಿ ಮೀಸಲಾತಿಯನ್ನು ನೀಡುವಂತೆ ದೊಡ್ಡ ಮಟ್ಟದ ಹೋರಾಟ ಜರುಗುತ್ತಿದ್ದು, ಆ ಹಿನ್ನೆಲೆಯಲ್ಲಿ ರಾಜ್ಯದ ಸುಮಾರು 40 ಲಕ್ಷದಷ್ಟು ಇರುವ ಗಾಣಿಗ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಹಿಂದುಗಳಿದ್ದು 2ಎ ಮೀಸಲಾತಿ ಸಿಗಬೇಕು ಎಂದು ಹೋರಾಟ ಮಾಡಲಾಗುತ್ತಿದೆ ಎಂದರು.

ರಾಜ್ಯದ ಬಹು ಸಂಖ್ಯಾತ ಸಮಾಜವಾಗಿರುವ ಗಾಣಿಗ ಸಮಾಜವನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಶೀಘ್ರದಲ್ಲಿ ಚಿತ್ರದುರ್ಗದಲ್ಲಿ ರಾಜ್ಯಮಟ್ಟದ ಗಾಣಿಗ ಸಮಾವೇಶವನ್ನು ಏರ್ಪಡಿಸಲಾಗುವುದು ಎಂದ ಅವರು, ಗಾಣಿಗರ ಪ್ರತಿ ಮನೆಯಲ್ಲಿ ಗಾಣ ದೇವತೆಯ ಪೋಟೋವನ್ನು ಹಾಕಿ ಕೊಳ್ಳುವ ಮೂಲಕ ಜಾಗೃತಿಯಾಗಬೇಕು ಎಂದರು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಪ್ರತಿಭಾ ಪುರಸ್ಕಾರದಂತಹ ಪ್ರೋತ್ಸಾಹ ಪಡೆದ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು, ವಿದ್ಯಾವಂತರಾದರೆ ಸರ್ಕಾರಿ ಕೆಲಸ, ಸ್ವಯಂ ಉದ್ಯೋಗಕ್ಕೆ ದಾರಿ ಸಿಗಲಿದೆ ಶಿಕ್ಷಣದ ಜೊತೆ ಉತ್ತಮ ಸಂಸ್ಕಾರವಂತರಾಗಿ ಎಂದರು.

ತಾಲ್ಲೂಕು ಗಾಣಿಗ ಸಮಾಜದ ಅಧ್ಯಕ್ಷ ಡಿ. ಬಿ. ವಾಸುದೇವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ತಾಲ್ಲೂಕಿನಲ್ಲಿ ಗಾಣಿಗ ಸಮಾಜ ಮುಖ್ಯವಾಹಿನಿಗೆ ಬರಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್, ತಾಲ್ಲೂಕು ಗಾಣಿಗರ ಸಂಘದ ಗೌರವ ಅಧ್ಯಕ್ಷ ಡಾ. ಎಸ್.ಎನ್. ಮಹೇಶ್, ಉಪವಿಭಾಗಾಧಿಕಾರಿ ಟಿ.ವಿ. ಪ್ರಕಾಶ, ಹುಬ್ಬಳ್ಳಿಯ ಅಖಿಲ ಭಾರತ ಗಾಣಿಗರ ಸಂಘದ ಡಾ. ಶೇಖರ ಡಿ. ಸಜ್ಜನರ, ವಿಜಯನಗರ ಜಿಲ್ಲಾಧ್ಯಕ್ಷ ಜಿ. ಉಮೇಶ, ವಕೀಲರುಗಳಾದ ಪಿ. ಬಸವರಾಜ, ರೇಣುಕಾ ಮೇಟಿ, ಮಹೇಶ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷರಾದ ಡಾ. ಜಯಶ್ರೀ ಪಾಟೀಲ್, ಎ.ಪಿ. ಎಂ.ಸಿ ಮಾಜಿ ಅಧ್ಯಕ್ಷ ಸುರೇಶ್, ಮುಖಂಡರುಗಳಾದ ತೆಲಗಿಯ ಎಸ್.ಬಿ. ಹನುಮಂತಪ್ಪ, ಜಿ.ಎಸ್. ಲೋಕೇಶ, ಡಾ. ಶಿವಕುಮಾರ, ಮಹೇಶ ದೊಡ್ಡಮನಿ, ಕೊಟ್ರೇಶ ಮತ್ತಿಹಳ್ಳಿ, ಶಿಕ್ಷಕರಾದ ಉಮೇಶ್ ಸೇರಿದಂತೆ ಇತರರು ಇದ್ದರು.

# ಅಶ್ವಿನಿ ಪೊನ್ನಪ್ಪಗೆ 15 ಲಕ್ಷ ಪುರಸ್ಕಾರ

ಬೆಂಗಳೂರು, ಆ. 9 - ಬ್ಯಾಡ್ಮಿಂಟನ್ ಮಿಕ್ಸಡ್ ಡಬಲ್ಸ್‌ನಲ್ಲಿ ಬೆಳ್ಳಿ ಗೆದ್ದ ಕನ್ನಡತಿ ಅಶ್ವಿನಿ ಪೊನ್ನಪ್ಪ ಅವರಿಗೆ ರಾಜ್ಯ ಸರ್ಕಾರದಿಂದ 15 ಲಕ್ಷ ರೂ. ನಗದು ಪುರಸ್ಕಾರ ನೀಡಲಾಗುವುದು ಎಂದು ಕ್ರೀಡಾ ಸಚಿವ ನಾರಾಯಣ ಗೌಡ ಘೋಷಿಸಿದ್ದಾರೆ.



ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಈಗಾಗಲೇ ಕ್ರಿಕೆಟ್‌ನಲ್ಲಿ ಬೆಳ್ಳಿ ಪದಕ ವಿಜೇತೆ ರಾಜೇಶ್ವರಿ ಗಾಯಕ್ವಾಡ್ ಅವರಿಗೆ 15 ಲಕ್ಷ ಹಾಗೂ ವೇಟ್ ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದ ಗುರುರಾಜ ಪೂಜಾರಿಗೆ 8 ಲಕ್ಷ ನಗದು ಪುರಸ್ಕಾರ ಘೋಷಿಸಲಾಗಿದೆ. ಇವರೆಲ್ಲರಿಗೂ ಶೀಘ್ರದಲ್ಲೇ ಮುಖ್ಯಮಂತ್ರಿಗಳ ಮೂಲಕ ನಗದು ಪುರಸ್ಕಾರ ನೀಡಿ ಗೌರವಿಸಲಾಗುವುದು. ಇದೇ ವೇಳೆ ಅಮೃತ ಕ್ರೀಡಾ ದತ್ತು ಯೋಜನೆಯಲ್ಲಿ ಆಯ್ಕೆಯಾಗಿರುವ ಕ್ರೀಡಾಪಟುಗಳನ್ನು ಸತ್ಕರಿಸಲಾಗುವುದು ಎಂದಿದ್ದಾರೆ.

## ನಾಡಿದ್ದು ಗಾಯತ್ರಿ ಪೂಜೆ

ದಾವಣಗೆರೆ, ಆ. 9 - ಶ್ರೀ ಗಾಯತ್ರಿ ಪರಿವಾರದಿಂದ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಸಾಮೂಹಿಕ ಶ್ರೀ ಗಾಯತ್ರಿ ಪೂಜೆಯು ನೂಲು ಹುಣ್ಣಿಮೆ ಅಂಗವಾಗಿ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ಇದೇ ದಿನಾಂಕ 12 ರ ಶುಕ್ರವಾರ ಬೆಳಿಗ್ಗೆ 7ಕ್ಕೆ ನಡೆಯಲಿದೆ ಎಂದು ಪರಿವಾರದ ಸಂಚಾಲಕ ಭಾವನ್ನಾರಾಯಣ ತಿಳಿಸಿದ್ದಾರೆ.

ಪರಿವಾರದ ಅಧ್ಯಕ್ಷರಾದ ಡಾ|| ಸುಶೀಲಮ್ಮ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.

# ಮತ್ತೆ ಮೈದುಂಬಿಕೊಂಡ ತುಂಗಭದ್ರೆ



**ಉಕ್ಕಡಗಾತ್ರಿ ಸಂಪರ್ಕಿಸುವ ಎರಡೂ ರಸ್ತೆ ಮುಳುಗಡೆ**

ಮಲೇಬೆನ್ನೂರು, ಆ.9- ಎಲ್ಲಾ ಕಡೆ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಎಲ್ಲಾ ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿದ್ದು, ತುಂಗಭದ್ರಾ ನದಿ ಇದೀಗ ಅಪಾಯ ಮಟ್ಟ ತಲುಪುವ ಸಮೀಪದಲ್ಲಿದೆ.

ತುಂಗಾ ಮತ್ತು ಭದ್ರಾ ಜಲಾಶಯಗಳಿಂದ ಸುಮಾರು 1 ಲಕ್ಷ ಕ್ಯೂಸೆಕ್ಸ್ ನೀರನ್ನು ನದಿಗೆ ಬಿಟ್ಟಿರುವುದರಿಂದ ಮತ್ತು ಹಳ್ಳ-ಕೊಳ್ಳಗಳ ನೀರು ನದಿಗೆ ಸೇರುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಈ ಬಾರಿ ಹೆಚ್ಚಾಗಿದೆ.

ಉಕ್ಕಡಗಾತ್ರಿ ಸಂಪರ್ಕಿಸುವ ಪತ್ತೇಪುರ ರಸ್ತೆ ಮತ್ತು ಮಾಳನಾಯಕನಹಳ್ಳಿ ರಸ್ತೆ ನದಿ ಹಿನ್ನೀರಿನಲ್ಲಿ ಮುಳುಗಡೆಯಾಗಿದ್ದು, ಈ ಎರಡೂ ರಸ್ತೆಗಳ ಸಂಪರ್ಕ ಬಂದ್ ಆಗಿದೆ.

ನದಿ ಪಾತ್ರದ ತೋಟಗಳು, ಭತ್ತದ ನಾಟಿ ಮಾಡಿದ್ದ ಗದ್ದೆಗಳು ಜಲಾವೃತಗೊಂಡಿವೆ. ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್, ಉಪತಹಶೀಲ್ದಾರ್ ಆರ್.ರವಿ ಮನವಿ ಮಾಡಿದ್ದಾರೆ.

ದೇವರಬೆಳಕೆರೆ ಪಿಕಪ್ ಡ್ಯಾಂಗೂ ಸಹ ಭಾರೀ ಪ್ರಮಾಣದ ನೀರು ಹರಿದು ಬರುತ್ತಿದ್ದು, ಅಷ್ಟೇ ಪ್ರಮಾಣದ ನೀರು ಹೊರಗಡೆ ಬರುತ್ತಿರುವುದರಿಂದ ಬ್ಯಾಲದಹಳ್ಳಿ ಹಳ್ಳವೂ ಮೈದುಂಬಿಕೊಂಡು ಹರಿಯುತ್ತಿದೆ. ಇಲ್ಲಿಯೂ ಸಹ ನೂರಾರು ಎಕರೆ ತೋಟಗಳು ಜಲಾವೃತವಾಗಿವೆ.

ಕೊಮಾರನಹಳ್ಳಿ ಕೆರೆಗೂ ಹರಿದು ಬರುವ ನೀರು ಹೆಚ್ಚಾಗಿದ್ದು, ಕೆರೆ ಕೋಡಿ ಮೂಲಕ ಭಾರೀ ಪ್ರಮಾಣದ ನೀರು ಹೊರ ಹೋಗುತ್ತಿದೆ. ಈ ನೀರೂ ಸಹ ದೇವರಬೆಳಕೆರೆ ಪಿಕಪ್ ಡ್ಯಾಂ ಸೇರಲಿದೆ. ಈ ನೀರಿನಿಂದಾಗಿ ಭತ್ತದ ನಾಟಿ ಮಾಡಿದ್ದ ಗದ್ದೆಗಳು ಮುಳುಗಡೆಯಾಗಿವೆ.

**ಹರಿಹರ ವರದಿ** : ನದಿ ಪಾತ್ರದಲ್ಲಿ ಬರುವಂತಹ ಗಂಗಾನಗರ, ಕೈಲಾಸ ನಗರ, ತೆಗ್ಗಿನಕೇರಿ, ಕೋಟೆ ಬಡಾವಣೆ, ಹಳೇ ಭರಂಪುರ, ಗುತ್ತೂರು, ದೀಟೂರು, ಚಿಕ್ಕಬಿದರಿ, ಹಲಸಬಾಳು, ಧೂಳೆಹೊಳೆ ಸೇರಿದಂತೆ ಹಲವು ಗ್ರಾಮಗಳಲ್ಲಿ ವಾಸಿಸುವ ಜನರನ್ನು ಸುರಕ್ಷಿತ ಸ್ಥಳಕ್ಕೆ ರವಾನಿಸಲಾಗಿದೆ ಎಂದು ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ತಿಳಿಸಿದ್ದಾರೆ.

ಎಪಿಎಂಸಿ ಆವರಣದಲ್ಲಿ ಕಾಳಜಿ ಕೇಂದ್ರವನ್ನು ತೆರೆದು ಗಂಗಾನಗರದ ನಿವಾಸಿಗಳಿಗೆ ವಸತಿ, ಊಟದ ವ್ಯವಸ್ಥೆ ಕಲ್ಪಿಸಲಾಗಿದೆ. ನಾಳೆ ಕೂಡ ನದಿ ನೀರಿನ ಪ್ರಮಾಣ ಹೆಚ್ಚಾಗುವ ಸಾಧ್ಯತೆ ಇದೆ. ಈ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರೂ ಸಹ ನದಿಗೆ ಇಳಿಯಬಾರದು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್, ಎಇಇ ಅಬ್ದುಲ್ ಹಮೀದ್, ತಾಲ್ಲೂಕು ಆಡಳಿತದ ಸಿಬ್ಬಂದಿಗಳಾದ ವಿ.ಎ. ಹೆಚ್.ಜಿ. ಹೇಮಂತ್, ಸಮೀರ್, ದೇವರಾಜ್ ಇತರರು ಹಾಜರಿದ್ದರು.

## 12 ರಂದು ನೂಲು ಹುಣ್ಣಿಮೆಯ ಜನಿವಾರ ಧಾರಣೆ

ದಾವಣಗೆರೆ, ಆ.9- ನಗರದ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನ ರಸ್ತೆಯಲ್ಲಿರುವ ಶ್ರೀ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಇದೇ ದಿನಾಂಕ 12 ರಂದು ಶುಕ್ರವಾರ ಬೆಳಿಗ್ಗೆ 8.30 ರಿಂದ 11.30 ರವರೆಗೆ ನೂಲು ಹುಣ್ಣಿಮೆಯ ಜನಿವಾರ ಧಾರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮಾಜ ಬಾಂಧವರು ದೇವಸ್ಥಾನದ ಪ್ರಧಾನ ಅರ್ಚಕರನ್ನು ಭೇಟಿ ಮಾಡಿ ಜನಿವಾರ ಹಾಕಿಸಿಕೊಳ್ಳಬಹುದು. ಅಂದು ಬೆಳಿಗ್ಗೆ ಸ್ವಾಮಿಗೆ ವಿಶೇಷ ಅಭಿಷೇಕ, ಮಹಾಪೂಜೆ ನಡೆಯಲಿದ್ದು, ಒಂದು ದಿನ ಮುಂಚಿತವಾಗಿ ತಮ್ಮ ಹೆಸರನ್ನು ನೋಂದಾಯಿಸಬಹುದು.

## ಭಾವೈಕ್ಯತೆಯ ಮೊಹರಂ ಆಚರಣೆ



**ಹರಿಹರ**

ಹರಿಹರ, ಆ.9 - ಜಾತಿ, ಧರ್ಮದ ಭೇದ ಭಾವ ತೊರೆದು ಸಡಗರ ಸಂಭ್ರಮದಿಂದ ಮೊಹರಂ ಹಬ್ಬವನ್ನು ಭಾವೈಕ್ಯತೆಯಿಂದ ಆಚರಿಸಲಾಗಿದೆ. ಅಮರಾವತಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ ಹಿಂದೂ, ಮುಸ್ಲಿಮರೆಲ್ಲರೂ ಅಲಾಯಿ ದೇವರ ದರ್ಶನ ಪಡೆದು, ಬಳಿಕ ಕೆಂಡ ತುಳಿದು ಭಕ್ತಿ ಸಮರ್ಪಿಸಿದರು. ನಂತರ ಮಧ್ಯಾಹ್ನ ಕೇಸರಿ ಬಾತ್ ಮತ್ತು ಪಲಾವನ್ನು ಹಿರಿಯರು, ಮಕ್ಕಳು, ಮಹಿಳೆಯರು ಸರತಿ ಸಾಲಿನಲ್ಲಿ ನಿಂತು ಪ್ರಸಾದ ಊಟ ಮಾಡಿ ಸಂಭ್ರಮಿಸಿದರು.

ಹರಿಹರ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ನಡೆಯವ ಮೊಹರಂ ಹಬ್ಬಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಹರಿಹರ, ಅಮರಾವತಿ, ನಾಗೇನಹಳ್ಳಿ, ಸಿರಿಗೆರೆ, ಗ್ರಾಮದ ಜನರು ನೂರಾರು ವರ್ಷಗಳಿಂದ ಒಟ್ಟಾಗಿ ಮೊಹರಂ ಹಬ್ಬವನ್ನು ಆಚರಣೆ ಮಾಡುತ್ತಿದ್ದಾರೆ.

ಈ ಸಂದರ್ಭದಲ್ಲಿ ಊರಿನ ಮುಖಂಡರಾದ ಜಟ್ಟಪ್ಪ ಗೌಡಜ್ಜ, ಹೊಸ್ಮನಿ ರಾಜಣ್ಣ, ಸಿದ್ದಣ್ಣ, ಮುಸ್ಲಿಂ ಸಮಾಜದ ಯುವ ಮುಖಂಡರಾದ ಯೂಸೂಫ್, ಆಸಿಫ್, ಫರೀದ್, ಸಮೀರ್, ತೋಫಿಕ್, ನೂರ್‌ಅಹ್ಮದ್, ರೋಷನ್, ಜಿಯಾಉಲ್ಲಾ ಮತ್ತಿತರರು ಹಾಜರಿದ್ದರು.

## ಭರಮಸಾಗರದಲ್ಲಿ ಶ್ರಾವಣ ಸಂಭ್ರಮ ಇಂದು ಹಿರಿಯ ಜೀವಿಗಳಿಗೆ ಸನ್ಮಾನ



ಪವಮಾನ ಪ್ರತಿಷ್ಠಾನವು ವಿನೂತನ ಕಾರ್ಯಕ್ರಮಗಳನ್ನು ಮಾಡುತ್ತಾ ಬರುತ್ತಿದ್ದು, ಅದರಂತೆ ಶ್ರಾವಣ ಹಬ್ಬದ ಸಂಭ್ರಮದಲ್ಲಿ ಸ್ಥಳೀಯ ಹಿರಿಯ ಜೀವಿಗಳಿಗೆ ಗೌರವಿಸಲಾಗುವುದು. ಶ್ರೀಮತಿ ಪುಟ್ಟಮ್ಮ ದಿ|| ಎಸ್. ಜಿ. ಸತ್ಯನಾರಾಯಣ ರಾವ್ ಶಾನಭೋಗರು (94), ಶ್ರೀಮತಿ ಜಯಮ್ಮ ದಿ|| ಎಸ್.ಬಿ. ಜಯರಾವ್ ಶಾನಭೋಗರು (92) ಹಾಗೂ ಹಲ್ಲೂರು ಮನೆತನದ ಗ್ರಾಮದ ಬ್ರಾಹ್ಮಣ ಸಮಾಜದ ಹಿರಿಯ ಮುಖಂಡರಾದ ಹೆಚ್.ಆರ್. ಕೃಷ್ಣ ಜೋಯಿಸ್ (82) ಇವರನ್ನು ಇಂದು ಸಂಜೆ ವಾಣಿ ನಿವಾಸ ಅಂಗಳದಲ್ಲಿ ಸನ್ಮಾನಿಸಿ, ಗೌರವಿಸಲಾಗುವುದು ಎಂದು ಶ್ರೀಮತಿ ವಿಜಯಲಕ್ಷ್ಮಿ ಬಿ.ಜೆ. ಅನಂತಪದ್ಮನಾಭ ರಾವ್ ತಿಳಿಸಿದ್ದಾರೆ.

## ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ

ಹರಿಹರ, ಆ.9- ಹಿಂದುಳಿದ ವರ್ಗದ ನಿರುದ್ಯೋಗಿಗಳಿಗೆ ಅಲ್ಪಾವಧಿ ತರಬೇತಿ ಉಚಿತ ನೀಡಲಾಗುತ್ತದೆ. ಅರ್ಜಿ ಸಲ್ಲಿಸಲು ದಿನಾಂಕ 19 ಕೊನೆ ದಿನ. ವಿವರಕ್ಕೆ ಸಂಪರ್ಕಿಸಿ: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಇಂಡಸ್ಟ್ರಿಯಲ್ ಏರಿಯ ಹರ್ಲಾಪುರ, ಹರಿಹರ ಫೋ: 9916018111, 8884488202, 8711913947.

# ಕಬ್ಬಿನ ಎಫ್‌ಆರ್‌ಪಿ ದರ ಖಂಡಿಸಿ 12 ಕ್ಕೆ ರಸ್ತೆ ತಡೆ



ದಾವಣಗೆರೆ, ಆ. 9 - ರಾಜ್ಯ ಕಬ್ಬು ಬೆಳೆಗಾರರ ಸಂಘ ಕರ್ನಾಟಕ ವತಿಯಿಂದ ಕೇಂದ್ರ ಸರ್ಕಾರ ಇತ್ತೀಚಿಗೆ ಕಬ್ಬಿಗೆ ಘೋಷಿಸಿರುವ ಎಫ್‌ಆರ್‌ಪಿ ದರವನ್ನು ಖಂಡಿಸಿ ಜಿಲ್ಲಾ ಪಂಚಾಯ್ತಿ ಎದುರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದೇ ದಿನಾಂಕ 12 ರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ರಸ್ತೆ ತಡೆ ನಡೆಸಲಾಗುತ್ತದೆ.

ಇತ್ತೀಚಿಗೆ ದಾವಣಗೆರೆ ಶುಗರ್ ಲಿಮಿಟೆಡ್ ವ್ಯಾಪ್ತಿಯ ಕಬ್ಬು ಬೆಳೆಗಾರರ ಸಂಘದವರು ಕುಕ್ಕುವಾಡದಲ್ಲಿ ನಡೆಸಿದ ಸಭೆಯಲ್ಲಿ ರಸ್ತೆ ತಡೆ ನಡೆಸುವ ಬಗ್ಗೆ ತೀರ್ಮಾನಿಸಲಾಯಿತು.

ಅಲ್ಲದೇ, ಒಂದು ಟನ್‌ಗೆ 95 ಕೆ.ಜಿ. ಸಕ್ಕರೆ ನೀಡುವ ಪ್ರತಿ ಟನ್ ಕಬ್ಬಿಗೆ 3500 ರೂ, ಎಫ್‌ಆರ್‌ಪಿ ನಿಗದಿಯಾಗಬೇಕು, ಅಗತ್ಯ ಪ್ರಮಾಣದ ಯೂರಿಯಾ ಸಕಾಲದಲ್ಲಿ ಪೂರೈಕೆಯಾಗಬೇಕು, ಹದಡಿ ಕೆರೆಯ ಏರಿಯನ್ನು ಸುಸಜ್ಜಿತವಾಗಿ ನಿರ್ಮಿಸಬೇಕು ಎಂಬಿತ್ಯಾದಿ ಒತ್ತಾಯಗಳನ್ನು ಸರ್ಕಾರಕ್ಕೆ ಮಾಡಲಾಯಿತು.

ಸಭೆಯಲ್ಲಿ ತೇಜಸ್ವಿ ಪಟೇಲ್, ಡಿ.ಬಿ. ಕುಕ್ಕುವಾಡದ ಶಂಕರ್, ಕುಮಾರ್, ಎ.ಎಸ್. ರಾಜು, ರವಿ, ಮಾರಿಮುತ್ತು, ಗುರುಲಿಂಗಪ್ಪ, ಕೈದಾಳೆ ಶ್ರೀಧರ್, ಮಲ್ಲಿಕಾರ್ಜುನ್, ನಾಗರಸನಹಳ್ಳಿಯ ಕೊಟ್ರೇಶ್, ವೀರೇಶ್, ಜಡಗನಹಳ್ಳಿ ಗುತ್ಯಪ್ಪ, ಕಾರಿಗನೂರು ಸತೀಶ್, ಕಲ್ಲೇಶ್, ಪ್ರಭು, ರಮೇಶ್, ರುದ್ರೇಶ್ ಮತ್ತಿತರರು ಇದ್ದರು.

# ನಗರದಲ್ಲಿ ಮೊಹರಂ 'ಯಾದೇ ಹುಸೇನ್' ಆಚರಣೆ

ದಾವಣಗೆರೆ, ಆ.9- ಚಂದ್ರ ದರ್ಶನದಿಂದ ಪ್ರಾರಂಭವಾಗಿರುವ ಮುಸ್ಲಿಂ ಬಾಂಧವರ ಹೊಸ ವರ್ಷದ ಸಂಕೇತವಾಗಿರುವ ಮೊಹರಂ 'ಯಾದೇ ಹುಸೇನ್' ಅನ್ನು ನಗರಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಆಚರಿಸಿದರು.

ಮೊಹರಂ ಅಂಗವಾಗಿ ನಗರದ ವಿವಿಧ ಪ್ರದೇಶಗಳಲ್ಲಿ ಆಲೇ ದೇವರು (ಪಂಜಾಗಳು) ಕುರುಹಿನಯಾಡಿದ್ದವು. ಎಂಟನೇ ದಿನವಾದ ಮೊನ್ನೆ ಹಾಗೂ ಹತ್ತನೇ ದಿನವಾದ ಇಂದು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮೊಹರಂ ಹಬ್ಬದ ಹತ್ತನೇ ಹಾಗೂ ಅಂತಿಮ ದಿನ ಇಂದು ಸಾಯಂಕಾಲ ಹೊಂಡದ ವೃತ್ತದ ಬಳಿ ಇರುವ ಹಜರತ್ ಸೈಯದ್ ರತನ್ ಷಾದಲ್ಲಿ ಬಾಬಾರವರ ದರ್ಗಾ ಆವರಣದಲ್ಲಿ ವಿವಿಧ ಭಾಗಗಳಲ್ಲಿ ಕುರುಹಿನ ಮಾಡಿದ್ದ ಆಲೇ ದೇವರು ಸಾಮೂಹಿಕವಾಗಿ ಸೇರಿಕೊಂಡು ಮೊಹರಂ ಹಬ್ಬಕ್ಕೆ ತೆರೆ ಎಳೆಯಲಾಯಿತು.

ನಂತರ ತಮ್ಮ ತಮ್ಮ ಗಂಟುಗಳನ್ನು ಕಟ್ಟಿಕೊಂಡು 'ಅಲ್ವಿದಾ, ಅಲ್ವಿದಾ' ಎಂಬ ಶ್ಲೋಕಗಳನ್ನು ಪಠಿಸುತ್ತಾ ಸಾಗುತ್ತಿದ್ದ ದೃಶ್ಯ ನಗರದ ಹಳೇ ಪ್ರದೇಶಗಳಲ್ಲಿ ಕಂಡು ಬಂದಿತು. ಭಾವೈಕ್ಯತೆಯ ಪ್ರತಿಬಿಂಬವಾಗಿರುವ ಮೊಹರಂ ಹಬ್ಬದಲ್ಲಿ ಹಿಂದೂ-ಮುಸ್ಲಿಂ ಬಾಂಧವರು ತಮ್ಮ ಹರಕೆಗಳನ್ನು ಅರ್ಪಿಸಿ, ದರ್ಶನ ಪಡೆದು ಪುಳಕಿತಗೊಂಡರು.



**ಯಾದೇ ಅಶುರಾ** : ಮೊಹರಂ ಅಂಗವಾಗಿ ನಗರದ ಮಸೀದಿಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ 'ದುವಾ' ಮಾಡುವ ಮೂಲಕ ಯೌವೇ ಅಶುರಾ ಪಡಿಸಲಾಯಿತು. ಇನ್ನು ಕೆಲವು ಕಡೆ 'ಕಿಚಡಾ' ಮಾಡಿ ಪ್ರಸಾದ ವಿನಿಯೋಗಿಸಲಾಯಿತು.

**ತಖರೀರ್ ಮುಕ್ತಾಯ** : ಚಂದ್ರ ದರ್ಶನದಿಂದ ನಗರದ ವಿವಿಧ ಬಡಾವಣೆಗಳಲ್ಲಿ ಮೊಹರಂ ಅಂಗವಾಗಿ 'ಯಾದೇ ಹುಸೇನ್' ಸ್ಮರಣಾರ್ಥ ಹಮ್ಮಿಕೊಂಡಿದ್ದ ತಖರೀರ್ ಉಪನ್ಯಾಸ ಕಾರ್ಯಕ್ರಮಗಳು ಇಂದು ಮುಕ್ತಾಯಗೊಂಡವು. ಕೆಲವು ಕಡೆ ಸಂಘ, ಸಂಸ್ಥೆಗಳ ಆಶ್ರಯದಲ್ಲಿ ಹಮ್ಮಿಕೊಂಡಿದ್ದರೆ ಇನ್ನು ಕೆಲವು ಕಡೆ ಮಸೀದಿಗಳಲ್ಲಿಯೇ ತಖರೀರ್ ಕಾರ್ಯಕ್ರಮ ಜರುಗಿದವು.

**ಷರಬತ್, ಸಿಹಿ ವಿತರಣೆ** : ಮೊಹರಂ ಅಂಗವಾಗಿ ನಗರದ ಪ್ರಮುಖ ಸ್ಥಳಗಳಲ್ಲಿ ವಿವಿಧ ಸಂಘಟನೆಗಳ ಮೂಲಕ ಷರಬತ್ ಹಾಗೂ ಸಿಹಿ ವಿತರಿಸಲಾಯಿತು. ಕಳೆದ ಎರಡು ವರ್ಷಗಳಿಂದ ಕೊರೊನಾ ಕರಿ ನೆರಳಿನಲ್ಲಿ ಭಯಭೀತರಾಗಿದ್ದ ಜನರಿಗೆ ಈ ಬಾರಿಯ ಮೊಹರಂ ಹಬ್ಬವು ಕೊಂಚ ಖುಷಿ ನೀಡಿತ್ತಾದರೂ ಶ್ರದ್ಧಾಭಕ್ತಿಯಿಂದ ರೋಜಾ (ಉಪವಾಸ) ಇರುವ ಮೂಲಕ ಕಳೆದ 10 ದಿನಗಳಿಂದ ಫಾತೇಹಾಖ್ವಾನಿ, ದುವಾ ಮಾಡುವ ಮೂಲಕ ದೇಶ ಹಾಗೂ ರಾಜ್ಯದ ಸಮೃದ್ಧಿ ಬಗ್ಗೆ ಉಲೇಮಾಗಳು ಆಶೀರ್ವಚನ (ದುವಾ) ಮಾಡಿದರು.

## ಸತತ ಮಳೆಗೆ 10 ಮನೆಗಳಿಗೆ ಹಾನಿ ಯಲವಟ್ಟಿಯಲ್ಲಿ ಬಿದ್ದ ಮನೆ : ಗಾಯ



ಮಲೇಬೆನ್ನೂರು, ಆ.9- ಸತತ ಮಳೆಯಿಂದಾಗಿ ಮಲೇಬೆನ್ನೂರು ಹೋಬಳಿಯಲ್ಲಿ ಮಂಗಳವಾರ 10 ಮನೆಗಳಿಗೆ ಹಾನಿಯಾಗಿದೆ. ಮಲೇಬೆನ್ನೂರು, ಕುಂಬಳೂರು, ಹರಳಹಳ್ಳಿ, ಹಾಲಿವಾಣ, ಮಲ್ಲನಾಯ್ಕನಹಳ್ಳಿ, ಎಳೆಹೊಳೆ, ಯಲವಟ್ಟಿಯಲ್ಲಿ ಮನೆಗಳ ಗೋಡೆ ಕುಸಿದು ಬಿದ್ದಿವೆ. ಯಲವಟ್ಟಿಯಲ್ಲಿ ಮನೆ ಗೋಡೆ ಕುಸಿದು ಬಿದ್ದ ಸಂದರ್ಭದಲ್ಲಿ ಮನೆ ಮಾಲೀಕ ಹನುಮಂತಪ್ಪ ಎಂಬಾತನ ಕೈ ಮುರಿದಿದೆ ಎನ್ನಲಾಗಿದೆ.

ತಹಶೀಲ್ದಾರ್ ಡಾ. ಬಿ.ಎಂ.ಅಶ್ವತ್ಥ್ ಅವರು ಹರಳಹಳ್ಳಿ, ಮಲೇಬೆನ್ನೂರು, ಕುಂಬಳೂರು ಗ್ರಾಮಗಳಿಗೆ ಭೇಟಿ ನೀಡಿ, ಬಿದ್ದಿರುವ ಮನೆಗಳನ್ನು ವೀಕ್ಷಿಸಿ ನಂತರ ಕೊಮಾರನಹಳ್ಳಿ ಕೆರೆಯಿಂದ ಭಾರೀ ಪ್ರಮಾಣದ ನೀರು ಹೊರಹೋಗುತ್ತಿರುವುದನ್ನು ಪರಿಶೀಲಿಸಿದರು.

ಉಪತಹಶೀಲ್ದಾರ್ ಆರ್.ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಕೊಟ್ರೇಶ್, ಅಣ್ಣಪ್ಪ, ಸುಭಾನಿ, ಶ್ರೀಧರ್ ಮತ್ತಿತರರು ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದಿನಿಂದ ಭಾರತ ಸೇವಾದಳದ ಅಮೃತ ಮಹೋತ್ಸವ

ಭಾರತದ ಸ್ವಾತಂತ್ರ್ಯಕ್ಕೆ 75 ವರ್ಷಗಳು ತುಂಬಿದ ಪ್ರಯುಕ್ತ ಭಾರತ ಸೇವಾದಳದಿಂದ ಇಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಮಧ್ಯಾಹ್ನ 3 ಗಂಟೆಗೆ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಹೊನ್ನಾಳಿ ಹಿರೇಕಲ್ಮಠದಲ್ಲಿ ರಾಷ್ಟ್ರಧ್ವಜ ಮಾಹಿತಿ ಶಿಬಿರ ನಡೆಯಲಿದೆ.

ನಾಳೆ ಗುರುವಾರ ಬೆಳಿಗ್ಗೆ 10 ಗಂಟೆಗೆ ನಿಟುವಳ್ಳಿ ಪ್ರೌಢಶಾಲೆಯಲ್ಲಿ ಸೇವಾದಳ ಮಕ್ಕಳಿಂದ ಅಮೃತ ಮಹೋತ್ಸವ ಮತ್ತು ಮನೆ ಮನೆಯಲ್ಲಿ ರಾಷ್ಟ್ರಧ್ವಜ ಕುರಿತು ಪ್ರಭಾತ್ ಪೇರಿ. ಅಂದು ಮಧ್ಯಾಹ್ನ 3 ಗಂಟೆಗೆ ಅತ್ತಿಗೆರೆ ಎಸ್.ಸಿ.ಎಸ್.ಜಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ 75 ಸಸಿಗಳನ್ನು ನೆಡುವ ಸಸ್ಯೋತ್ಸವ ಕಾರ್ಯಕ್ರಮ.

ದಿನಾಂಕ 12 ರ ಶುಕ್ರವಾರ 11 ಗಂಟೆಗೆ ನಗರದ ಡಿಆರ್ ಪೊಲೀಸ್ ಮೈದಾನ ಜಿಲ್ಲಾಡಳಿತ ಪೊಲೀಸ್ ಇಲಾಖೆ ಸೇವಾದಳ ಸಹಯೋಗದಲ್ಲಿ ರಾಷ್ಟ್ರಧ್ವಜ ಮಾಹಿತಿ ಕಾರ್ಯಾಗಾರ.

ದಿನಾಂಕ 13ರ ಶನಿವಾರ ಬೆಳ್ಳಿಗ್ಗೆ 10 ಗಂಟೆಗೆ ಮಕ್ಕಳಿಗೆ ರಾಷ್ಟ್ರಧ್ವಜ ಚಿತ್ರ ಬರೆಯುವ ಸ್ಪರ್ಧೆ, 12.30 ಕ್ಕೆ ಸ್ವಾತಂತ್ರ್ಯ ಹೋರಾಟಗಾರರ ಕುರಿತು ವೇಷಭೂಷಣ ಸ್ಪರ್ಧೆ ನಡೆಯುವುದು. ನಂತರ ನಗರದ ಭಾರತ ಸೇವಾದಳ ಭವನದಲ್ಲಿ ಬಹುಮಾನ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.


## ಮಠದರ ದ್ರಾಕ್ಷಾಯಣಮ್ಮ ನಿಧನ



ದಾವಣಗೆರೆ ಜಿಲ್ಲಾ ಐಗೂರು ವಾಸಿಯಾದ

**ಮಠದರ ದ್ರಾಕ್ಷಾಯಣಮ್ಮ**

ಇವರು, ದಿನಾಂಕ : 09.08.2022ರ ಮಂಗಳವಾರ ಮಧ್ಯಾಹ್ನ 2.00 ಗಂಟೆಗೆ ನಿಧನರಾಗಿರುತ್ತಾರೆ. ಮೃತರಿಗೆ ಮೂರು ಜನ ಗಂಡು ಮಕ್ಕಳು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು ದಿನಾಂಕ : 10.08.2022ರ ಬುಧವಾರ ಬೆಳಿಗ್ಗೆ 11.00ಕ್ಕೆ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.


ಇಂತಿ ದುಃಖತಪ್ತರು :

**ಎಂ.ಬಿ. ಬಸವರಾಜಪ್ಪ**, ಗ್ರಾ.ಪಂ. ಮಾಜಿ ಅಧ್ಯಕ್ಷರು
**ಎಂ.ಬಿ. ಕೆಂಚವೀರಪ್ಪ, ಎಂ.ಬಿ. ನಾಗರಾಜಪ್ಪ ಮತ್ತು ಮಕ್ಕಳು,**
**ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮಠದ ವಂಶಸ್ಥರು**
ಫೋ. : 99454 18810, 99646 69145

**ಸೂಚನೆ : ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ : 13.08.2022ರ ಶನಿವಾರ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.**

|| ಶ್ರೀ ದುರ್ಗಾಂಬಿಕಾ ದೇವಿ ಪ್ರಸನ್ನ || || ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ತಾಲ್ಲೂಕು ಹದಡಿ ಗ್ರಾಮದ ವಾಸಿಗಳಾದ **ಶ್ರೀ ಬೂದಾಳ್ ನಾಗರಾಜಪ್ಪನವರು ಮಾಡುವ ವಿಜ್ಞಾಪನೆಗಳು.**

ದಿನಾಂಕ : 02.08.2022ರ ಮಂಗಳವಾರ ರಾತ್ರಿ 7.30ಕ್ಕೆ ನನ್ನ ಧರ್ಮಪತ್ನಿಯವರಾದ **ಶ್ರೀಮತಿ ಗೌರಮ್ಮನವರು** ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **"ಕೈಲಾಸ ಸಮಾರಾಧನೆ"ಯನ್ನು ದಿನಾಂಕ : 10.08.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ಹದಡಿ ಗ್ರಾಮದಲ್ಲಿರುವ ಮೃತರ** ಸ್ವಗೃಹದಲ್ಲಿ ನೆರವೇರಿಸಲು ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು : ಮೃತರ ಪತಿ : **ಬೂದಾಳ್ ನಾಗರಾಜಪ್ಪ ಮತ್ತು ಮಕ್ಕಳು**
**ಶ್ರೀಮತಿ ನಿಂಗಮ್ಮ ಕೋಂ ದಿ|| ಟಿ. ಶೇಖರಪ್ಪ ಮತ್ತು ಮಕ್ಕಳು**, ಹರಿಹರ.
**ಟಿ. ನಾಗರಾಜ್**, ನಿವೃತ್ತ ಕಾರ್ಯಪಾಲಕ ಅಭಿಯಂತರರು, ದಾವಣಗೆರೆ.
**ಟಿ. ನೀಲಕಂಠಪ್ಪ**, ನಿವೃತ್ತ ಎಸಿಎಫ್, ದಾವಣಗೆರೆ.
**ಟಿ. ಮಲ್ಲೇಶಪ್ಪ**, ಗ್ರಾ.ಪಂ. ಮಾಜಿ ಸದಸ್ಯರು, ಬೂದಿಹಾಳ್.
**ಟಿ. ಮುಕುಂದ**, ಮಾಜಿ ಉಪಾಧ್ಯಕ್ಷರು, ಜಿ.ಪಂ. ದಾವಣಗೆರೆ. ಮತ್ತು
**ದಿ|| ಕೋಟಿ ಬಸಪ್ಪ ವಂಶಸ್ಥರು, ಬೂದಿಹಾಳ್ ಹಾಗೂ ಬಂಧು-ಮಿತ್ರರು**

**ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.**


## ನಾಳೆ ಯಜುರ್ವೇದ ನಿತ್ಯ ಉಪಾಕರ್ಮ


ದಾವಣಗೆರೆ, ಆ. 9 - ಶ್ರೀ ಶಂಕರ ಸೇವಾ ಸಂಘದಿಂದ ಪ್ರತಿವರ್ಷದಂತೆ ಈ ಬಾರಿಯೂ ಕೂಡ ಯಜುರ್ವೇದ ನಿತ್ಯ ಉಪಕರ್ಮವನ್ನು ನಾಡಿದ್ದು ದಿನಾಂಕ 11ರ ಬೆಳಿಗ್ಗೆ 7 ಗಂಟೆಗೆ ರಿಂಗ್ ರಸ್ತೆಯಲ್ಲಿರುವ ಶ್ರೀ ಶಂಕರ ಸಮುದಾಯ ಭವನದಲ್ಲಿ ಹಮ್ಮಿಕೊಂಡಿದ್ದು, ಆಸಕ್ತ ಬ್ರಾಹ್ಮಣರು ಭಾಗವಹಿಸಲು ಸಂಘದ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಷಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192- 221680, 8296408068.


## ಹೆಚ್. ಬಸವಾಪುರ ಗೌಡ್ರ ಕಲ್ಲಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಚ್. ಬಸವಾಪುರ ಗ್ರಾಮದ ವಾಸಿ ದಿ|| ಗೌಡ್ರ ಪುರದಜ್ಜರ ಈಶ್ವರಪ್ಪನವರ ಪತ್ನಿ ಪುರದಜ್ಜರ ಕಲ್ಲಮ್ಮ ಇವರು ದಿನಾಂಕ: 9.8.2022 ರ ಮಂಗಳವಾರ ಮಧ್ಯಾಹ್ನ 2.30 ಗಂಟೆಗೆ ನಿಧನರಾದರು. ನಾಲ್ವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ: 10.8.2022ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ಹೆಚ್ ಬಸವಾಪುರದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.


## ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ಮನವಿ



ದಾವಣಗೆರೆ, ಆ. 9- ನಗರದ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರದ ಮಳಿಗೆ ಯೊಂದರ ಮುಂಭಾಗ ಜಿತೇಂದ್ರ ಚವ್ಹಾಣ್ ತಂದೆ ಲಕ್ಷ್ಮಣ ಎಂಬ ಹೆಸರಿನ ವಾರಸುದಾರ ರಿಲ್ಲದ 51 ವರ್ಷದ ಅನಾ ರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿಯನ್ನು ನಗ ರದ ಸಿಜಿ ಆಸ್ಪತ್ರೆಗೆ ಚಿಕಿತ್ಸಗಾಗಿ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ವ್ಯಕ್ತಿ ಮೃತಪಟ್ಟಿರುತ್ತಾನೆ. ಜಿತೇಂದ್ರ ಚವ್ಹಾಣ್ ಹೆಸರಿನ ಈತ, ಕುತ್ತಿಗೆಯ ಬಲ ಭಾಗದಲ್ಲಿ ಕಪ್ಪು ಮಚ್ಚೆ, ತೆಳ್ಳನೆಯ ಮೈ ಕಟ್ಟು, ದುಂಡು ಮುಖ, ನೀಲಿ ಬಣ್ಣದ ತುಂಬು ತೋಳಿನ ಶರ್ಟ್, ಬಿಳಿ ಪೈಜಾಮು ಧರಿಸಿರುವ ವ್ಯಕ್ತಿಯ ವಾರಸುದಾರರಿದ್ದಲ್ಲಿ ಕೆಟಿಜೆ ನಗರ ಪೊಲೀಸ್ ಠಾಣೆ ಸಂಪರ್ಕಿಸಬಹುದು. ವಿವರಕ್ಕೆ ಸಂಪರ್ಕಿಸಿ : 08192-259285, 9480803250.

## ಅಪರಿಚಿತ ಶವದ ವಾರಸುದಾರರ ಪತ್ತೆಗೆ ಮನವಿ



ದಾವಣಗೆರೆ, ಆ. 9- ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ ಇರುವ ಮಳಿಗೆ ಮುಂಭಾಗ 55 ವರ್ಷ ವಯಸ್ಸಿನ ಅನಾರೋಗ್ಯದಿಂದ ಎಚ್ಚರ ತಪ್ಪಿ ಬಿದ್ದಿದ್ದ ಮಹಿಳೆಯನ್ನು ಸಿಜಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಳು. ಬಲಗೈಯಲ್ಲಿ ಶಂಕರಿ ಅಂತ ಅಚ್ಚೆ ಇದ್ದು, ಎಡಗಾಲು ಪಾದ ಬ್ಯಾಂಡೇಜ್ ಹಾಕಿರುತ್ತದೆ. ಎಡಗಾಲಿನ ಮೇಲೆ ಗಾಯದ ಕಲೆಗಳಿವೆ. ತೆಳ್ಳನೆಯ ಮೈ ಕಟ್ಟು, ಕೋಲು ಮುಖ, ಹಸಿರು ಬಣ್ಣದ ಆಸ್ಪತ್ರೆಯ ಗೌನು ಧರಿಸಿರುವ ಶವದ ವಾರಸುದಾರರು ಇದ್ದಲ್ಲಿ ತಕ್ಷಣ ಕೆಟಿಜೆ ನಗರ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದು.

# ಸ್ವಾತಂತ್ರ್ಯ ಸೇನಾನಿಗಳನ್ನು, ಯೋಧರನ್ನು, ರೈತರನ್ನು ನಿತ್ಯವೂ ಸ್ಮರಣೆ ಮಾಡಬೇಕು



ತಿರಂಗ ಯಾತ್ರೆ..

ಕ್ವಿಟ್ ಇಂಡಿಯಾ ಚಳವಳಿಯ 80 ನೇ ವರ್ಷಾಚರಣೆಯ ಅಂಗವಾಗಿ ಬಿಜೆಪಿ ದಕ್ಷಿಣ ವಿಧಾನಸಭಾ ಕ್ಷೇತ್ರ ಸಮಿತಿ ವತಿಯಿಂದ ಮಂಗಳವಾರ ದಾವಣಗೆರೆ ನಗರ ದೇವತೆ ದುರ್ಗಾಂಬಿಕ ದೇವಸ್ಥಾನದ ಆವರಣದಿಂದ ಮಹಾನಗರ ಪಾಲಿಕೆವರೆಗೆ ತಿರಂಗ ಯಾತ್ರೆ ಹಮ್ಮಿಕೊಳ್ಳಲಾಗಿತ್ತು.

ದಾವಣಗೆರೆ, ಆ.9- ದೇಶಕ್ಕಾಗಿ ಹೋರಾಡಿ ಮಡಿದ ಸ್ವಾತಂತ್ರ್ಯ ಸೇನಾನಿಗಳನ್ನು, ಗಡಿ ಕಾಯುವ ವೀರಯೋಧರು ಹಾಗೂ ಅನ್ನದಾತ ರೈತರನ್ನು ನಿತ್ಯವೂ ಸ್ಮರಣೆ ಮಾಡುವ ಅಗತ್ಯವಿದೆ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಹೇಳಿದರು.

ಕ್ವಿಟ್ ಇಂಡಿಯಾ ಚಳವಳಿಯ 80 ನೇ ವರ್ಷಾಚರಣೆಯ ಅಂಗವಾಗಿ ಬಿಜೆಪಿ ದಕ್ಷಿಣ ವಿಧಾನಸಭಾ ಕ್ಷೇತ್ರ ಸಮಿತಿ ವತಿಯಿಂದ ನಗರ ದೇವತೆ ದುರ್ಗಾಂಬಿಕ ದೇವಸ್ಥಾನದ ಆವರಣದಿಂದ ಮಹಾನಗರ ಪಾಲಿಕೆವರೆಗೆ ಹಮ್ಮಿಕೊಂಡಿದ್ದ ತಿರಂಗ ಯಾತ್ರೆ ನಂತರ ಪಾಲಿಕೆ ಆವರಣದಲ್ಲಿರುವ ಆರು ಜನ ಸ್ವಾತಂತ್ರ್ಯ ಯೋಧರ ಸ್ಮಾರಕಕ್ಕೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಾಂಧೀಜಿಯವರ ಕಾಲದಲ್ಲಿ ಇದ್ದಿದ್ದು ಮೂಲ ಕಾಂಗ್ರೆಸ್ ಈಗಿನದು ನಕಲಿ ಕಾಂಗ್ರೆಸ್. ಕೇವಲ ಆಡಳಿತಕ್ಕಾಗಿ ಕಟ್ಟಿದ ಪಕ್ಷ ಕಾಂಗ್ರೆಸ್ ಎಂದು ಟೀಕಿಸಿದ ಯಶವಂತರಾವ್ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಹೇಳಿಕೆ ನೋಡಿದರೆ ರಾಷ್ಟ್ರಧ್ವಜದ ಬಣ್ಣಗಳ ಬಗ್ಗೆಯೇ ಸರಿಯಾದ ಮಾಹಿತಿ ಇಲ್ಲದಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಮಾತನಾಡಿ, 1942 ರ ಕ್ವಿಟ್ ಇಂಡಿಯಾ ಚಳವಳಿಯ ಸಂದರ್ಭದಲ್ಲಿ ದಾವಣಗೆರೆ ಗಡಿಯಾರ ಕಂಬದ ಬಳಿ ನಗರದ ಆರು ಜನ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ಗುಂಡೇಟಿಗೆ ಬಲಿಯಾದರು. ಕಳೆದ 10 ವರ್ಷಗಳಿಂದ ಸ್ಮರಣೆ ಕಾರ್ಯಕ್ರಮ ನಡೆಸುತ್ತಾ ಬಂದಿದ್ದೇವೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ 'ಘರ್ ಘರ್ ತಿರಂಗಾ' ಕಡ್ಡಾಯ ಆಚರಣೆ ಹಿನ್ನೆಲೆಯಲ್ಲಿ ಆ. 13 ರಿಂದ 15 ರವರೆಗೆ ಪ್ರತಿ ಮನೆಗಳ ಮೇಲೆ ಧ್ವಜಾರೋಹಣ ಮಾಡುವ ಮೂಲಕ ರಾಷ್ಟ್ರಭಕ್ತಿ ತೋರುವಂತೆ ಕರೆ ನೀಡಿದರು.

ಮಾಜಿ ಮೇಯರ್ ಬಿ.ಜಿ. ಅಜಯ್‌ಕುಮಾರ್ ಮಾತನಾಡಿ, 75 ನೇ ಸ್ವಾತಂತ್ರ್ಯ ದಿನವನ್ನು ಹಬ್ಬದ ರೀತಿಯಲ್ಲಿ ಸಂಭ್ರಮದಿಂದ ಆಚರಿಸುವ ಮೂಲಕ ಗೌರವ ಕೊಡಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಪಾಲಿಕೆ ಉಪ ಮೇಯರ್ ಗಾಯತ್ರಿಬಾಯಿ ಖಂಡೋಜಿರಾವ್, ಮುಖಂಡರಾದ ಎಲ್.ಡಿ. ಗೋಣೆಪ್ಪ, ಶಿವನಗೌಡ ಪಾಟೀಲ್, ಪಿ.ಸಿ. ಶ್ರೀನಿವಾಸ್, ಡಿ.ಎಲ್. ರಾಮಚಂದ್ರಪ್ಪ, ದೂಡಾ ಮಾಜಿ ಸದಸ್ಯೆ ದೇವೀರಮ್ಮ, ಪಾಲಿಕೆ ಸದಸ್ಯರಾದ ಆರ್.ಎಲ್. ಶಿವಪ್ರಕಾಶ್, ರಾಕೇಶ್ ಜಾಧವ್, ಸೋಗಿ ಶಾಂತಕುಮಾರ್ ಮತ್ತಿತರರಿದ್ದರು.

ದುರ್ಗಾಂಬಿಕ ದೇವಸ್ಥಾನದ ಆವರಣದಲ್ಲಿ ತಿರಂಗ ಯಾತ್ರೆಗೆ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ ಚಾಲನೆ ನೀಡಿದರು. ಎಸ್.ಕೆ.ಪಿ. ರಸ್ತೆ, ವಸಂತ ರಸ್ತೆ, ರೇಣುಕಾ ಮಂದಿರದ ಮೂಲಕ ಪಾಲಿಕೆ ಆವರಣದಲ್ಲಿ ಯಾತ್ರೆ ಮುಕ್ತಾಯ ಮಾಡಲಾಯಿತು.

# ರಾಷ್ಟ್ರಧ್ವಜದ ಅರಿವು ಮೂಡಿಸಿ

## ಹರಿಹರ: ಸರ್ಕಾರಿ ನೌಕರರಿಗೆ ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಕರೆ



ಹರಿಹರ, ಆ.9 - ರಾಜ್ಯಾದ್ಯಂತ ಸರ್ಕಾರಿ ನೌಕರರ ಸೇರಿದಂತೆ ಎಲ್ಲರೂ ಒಗ್ಗಟ್ಟಿನಿಂದ ರಾಷ್ಟ್ರ ಧ್ವಜ ಹಾರಿಸುವ ಅರಿವು ಮೂಡಿಸಬೇಕು ಎಂದು ತಹಶೀಲ್ದಾರ್ ಡಾ. ಎಂ.ಬಿ. ಅಶ್ವತ್ಥ್ ಹೇಳಿದರು.

ನಗರದ ಗುರುಭವನದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹರಿಹರ ತಾಲ್ಲೂಕು ಘಟಕದ ವತಿಯಿಂದ ಆಯೋಜಿಸಿದ್ದ ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ ಅಭಿಯಾನದಡಿ ರಾಷ್ಟ್ರಧ್ವಜ ವಿತರಣೆಯ ಸಮಾರಂಭ ಉದ್ಘಾಟನೆ ಹಾಗು ಶಾಖೆಯ ನೂತನ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಕೇಂದ್ರ ಸರ್ಕಾರ ಆಯೋಜಿಸಿರುವ ಪ್ರತಿ ಮನೆಯಲ್ಲಿ ರಾಷ್ಟ್ರಧ್ವಜ ಅಭಿಯಾನದ ಅರಿವನ್ನು ತಾಲ್ಲೂಕಿನ ಎಲ್ಲಾ ಜನತೆಗೆ ಅಧಿಕಾರಿ ವರ್ಗದವರು ಮೂಡಿಸಬೇಕು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 13 ರಿಂದ 15 ರ ವರೆಗೆ ಮೂರು ದಿನಗಳ ಕಾಲ ದೇಶದ ಎಲ್ಲಾ ಮನೆಗಳ ಮೇಲೆ ರಾಷ್ಟ್ರ ಧ್ವಜವನ್ನು ಹಾರಿಸುವಂತೆ ಆದೇಶ ನೀಡಲಾಗಿದೆ ಎಂದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ನೌಕರರು ಸರಿಯಾಗಿ ತಮ್ಮ ಕೆಲಸ ಮಾಡಿದಾಗ ಸರ್ಕಾರದ ಯೋಜನೆಗಳು ಸಫಲವಾಗಲು ಸಾಧ್ಯ. ತಾಲ್ಲೂಕು ಸರ್ಕಾರಿ ನೌಕರರ ಸಂಘದಿಂದ ರಾಷ್ಟ್ರಧ್ವಜ ವಿತರಣೆ ಮಾಡುತ್ತಿರುವುದು ತುಂಬಾ ಸಂತೋಷದಾಯಕ ಕೆಲಸ ಎಂದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಪಾಲಾಕ್ಷಿ ಮಾತನಾಡಿ, ಕೇಂದ್ರ ಸರ್ಕಾರದ ಸಮಾನ ವೇತನ, ನೂತನ ಪಿಂಚಣಿ ಯೋಜನೆ ರದ್ದತಿ ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ನಮ್ಮ ಮೂರು ಪ್ರಮುಖ ಬೇಡಿಕೆಗಳು. ಡಿಸೆಂಬರ್ ವೇಳೆಗೆ 7ನೇಯ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಎಸ್. ರಾಮಪ್ಪ ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಘದ ನಿಕಟಪೂರ್ವ ಅಧ್ಯಕ್ಷ ಬಿ. ರೇವಣಸಿದ್ದಪ್ಪ ಅಂಗಡಿ ವಹಿಸಿದ್ದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ಶಾಹಿನಾ ಬಾನು, ಸಂಘದ ಜಿಲ್ಲಾ ಕಾರ್ಯದರ್ಶಿ ಗುರುಮೂರ್ತಿ, ಖಜಾಂಚಿ ತಿಪ್ಪೇಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಡಾ.ಎಸ್.ರಂಗನಾಥ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಈಶಪ್ಪ ಬೂದಿಹಾಳ್, ತಾಲ್ಲೂಕು ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಖಜಾಂಚಿ ಡಿ.ಎನ್.ಅರವಿಂದ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ನಾಸಿರುದ್ದೀನ್, ಪಶುಪಾಲನೆ ಇಲಾಖೆ ಸಹಾಯಕ ನಿರ್ದೇಶಕ ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ನೌಕರರ ಸಂಘದ ಡಿ.ಟಿ. ಮಂಜಪ್ಪ ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಬಿ.ಬಿ. ರೇವಣ್ಣ ನಾಯಕ್ ನಿರೂಪಿಸಿದರು.

# ಸಂಸ್ಕಾರದಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

## ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವರ್ತಕ ಬಿ.ಸಿ. ಉಮಾಪತಿ ಕಿವಿ ಮಾತು



ದಾವಣಗೆರೆ, ಆ.9- ನಗರದ ಬಸವರಾಜಪೇಟೆಯಲ್ಲಿ ನಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜದ ಹರಿಹರ ಪೀಠದ ಧರ್ಮದರ್ಶಿ, ಜವಳಿ ವರ್ತಕ ಬಿ.ಸಿ. ಉಮಾಪತಿ ಭಾಗವಹಿಸಿ, ಸಂಸ್ಕಾರದಿಂದ ನಿಮ್ಮಭವಿಷ್ಯರೂಪಿಸಿಕೊಳ್ಳಿಎಂದುಕರೆನೀಡಿದರು.

ಶ್ರೀ ಬಸವೇಶ್ವರ, ಶ್ರೀ ವೀರೇಶ್ವರ ದೇವಸ್ಥಾನ ಸಮಿತಿಯವರು ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳು ಬರೀ ಹೆಚ್ಚು ಅಂಕ ಗಳಿಸುವ ಬಗ್ಗೆ ಯೋಚಿಸದೇ ಸಾಮಾಜಿಕ ಜವಾಬ್ದಾರಿಯ ಬಗ್ಗೆಯೂ ಎಚ್ಚರಿಕೆ ವಹಿಸಬೇಕೆಂದರು.

ಇಂದಿನ ಯುವಕರು ಧರ್ಮದ ಆಚರಣೆಯನ್ನು ಬಿಟ್ಟು ದುರಾಶೆಯತ್ತ ಹೊರಟು, ಕಾಯಕ ಮತ್ತು ಪೋಷಕರನ್ನು ಮರೆಯುತ್ತಿದ್ದಾರೆ. ಪೋಷಕರು ಮಕ್ಕಳು ಸಣ್ಣವರಿದ್ದಾಗಲೇ ಬಸವಣ್ಣನವರ ಒಂದೊಂದು ವಚನಗಳನ್ನು ಕಲಿಸಬೇಕೆಂದು ಸಲಹೆ ನೀಡಿ, ಬಸವ ತತ್ವ ಪ್ರಚಾರಕರು ವಚನಗಳನ್ನು ವೇದಿಕೆಗೆ ಸೀಮಿತಗೊಳಿಸದೇ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಇಂದು ಧರ್ಮಾಚರಣೆ ಉಳಿದಿದ್ದರೆ ಅದು ಮಹಿಳೆಯರಿಂದ ಮಾತ್ರ ವಿಭೂತಿ, ಕುಂಕುಮ, ಗಂಧ, ಶಿವಪೂಜೆ ಎಲ್ಲವೂ ವೈಜ್ಞಾನಿಕವಾಗಿದೆ, ಅದರ ಆಚರಣೆಯಿಂದ ಕಾಯಕ ಜೀವಿಗಳಾಗಬೇಕೆಂದು ನುಡಿದು, ಕಮಿಟಿಯವರು ಒಗ್ಗಟ್ಟಾಗಿ ಒಂದಾಗಿ ಬಂದರೆ ಈ ಭಾಗದಲ್ಲಿ ವೀರಪ್ಪ ಎಂ. ಬಾವಿಯವರು ಪ್ರಸ್ತಾಪಿಸಿದಂತೆ ಕಲ್ಯಾಣ ಮಂಟಪ ಕಟ್ಟಿಸುವ ಬಗ್ಗೆ ನಮ್ಮ ಕುಟುಂಬದವರ ಜೊತೆ ಮಾತನಾಡಿ, ಇತ್ಯರ್ಥಪಡಿಸುವುದಾಗಿ ಭರವಸೆ ನೀಡಿದರು.

ಉಪನ್ಯಾಸ ನೀಡಿದ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಎಂ.ಟಿ. ಮಳಗಿ ಮಾತನಾಡಿ, ವ್ಯಾಪಾರ, ವ್ಯವಹಾರ, ಕೃಷಿಗೂ ಶಿಕ್ಷಣ ತಳಪಾಯವಾಗಿದೆ. ಅಂತೆಯೇ ಪೋಷಕರು ತಮ್ಮ ಸಮಸ್ಯೆಗಳೇನೇ ಇದ್ದರೂ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ವಿದ್ಯಾರ್ಥಿಗಳು ಶ್ರದ್ಧೆಯಿಂದ ತಮ್ಮ ಜೀವನ ರೂಪಿಸಿಕೊಳ್ಳುವುದರ ಜೊತೆಗೆ ಸ್ವತಂತ್ರವಾಗಿ ಬಾಳುವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳ ಬೇಕೆಂದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅಕ್ಕಿ ವರ್ತಕ ಎಸ್.ಜಿ.ಉಳುವಯ್ಯ, ಪೊಲೀಸ್ ಇಲಾಖೆಯ ಶ್ರೀಮತಿ ಜಿ.ಸಿ. ಸವಿತಾ, ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ವೀರಪ್ಪ ಎಂ. ಭಾವಿ ಮತ್ತಿತರರು ಮಾತನಾಡಿದರು.

ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಭು ಕಲಬುರ್ಗಿ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಉಮಾ ಪ್ರಾರ್ಥಿಸಿದರು. ದಂಡಪ್ಪರ ಪ್ರಕಾಶ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಯಕ್ರಮ ನಿರೂಪಿಸಿದ ಕುಂಟೋಜಿ ಚನ್ನಪ್ಪ ಅಂತ್ಯದಲ್ಲಿ ವಂದಿಸಿದರು. ಖಜಾಂಚಿ ಪ್ರಕಾಶ್, ಮಣಿಕಂಠ, ಮಲ್ಲಪ್ಪ ಬಿರಾದಾರ, ಶ್ರೀಮತಿ ರುದ್ರಮ್ಮ, ಮರವಂಜಿ ಮಹದೇವಪ್ಪ, ಆರ್. ವೀರಣ್ಣ, ಪ್ರಕಾಶ್, ಹನುಮಂತಪ್ಪ, ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು.

# ಪದ್ಮಶಾಲಿ ಸಮಾಜ ಸೇವಾ ಸಂಘಕ್ಕೆ ನಾಗರಾಜ್ ಅಧ್ಯಕ್ಷ



ದಾವಣಗೆರೆ, ಆ.9- ನಗರದ ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷರಾಗಿ ಪಿ.ಜೆ. ನಾಗರಾಜ್ ಆಯ್ಕೆಯಾಗಿದ್ದಾರೆ.

ಪ್ರಭಾರಿ ಅಧ್ಯಕ್ಷರಾಗಿದ್ದ ಐರಣಿ ನಿಂಗಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆಯನ್ನು ಮಾಡಲಾಯಿತು ಎಂದು ಸಂಘದ ಕಾರ್ಯದರ್ಶಿ ಡಿ.ಎಸ್.ಕೆ. ಪರಶುರಾಮ್ ತಿಳಿಸಿದ್ದಾರೆ.

# ಕೆರೆ ಏರಿ ದುರಸ್ತಿಗೆ 1.70 ಕೋಟಿ

**(1ನೇ ಪುಟದಿಂದ)** ಕಾರ್ಯಕರ್ತರಿದ್ದಾರೆ. ಸಿದ್ದರಾಮೋತ್ಸವದಿಂದ ಭಯ ಪಡುವ ಅವಶ್ಯಕತೆ ಇಲ್ಲ ಎಂದವರು ಹೇಳಿದರು.

ಈ ವೇಳೆ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ಜಿ.ಪಂ. ಸಿಇಓ ಡಾ. ಚೆನ್ನಪ್ಪ, ಅಪರ ಜಿಲ್ಲಾಧಿಕಾರಿ ಲೋಕೇಶ್, ಹೆಚ್ಚುವರಿ ಜಿಲ್ಲಾ ರಕ್ಷಣಾ ಧಿಕಾರಿ ಆರ್. ಬಿ.ಬಸರಗಿ ಮತ್ತಿತರರಿದ್ದರು.

# ಮೋದಿ ಆಸ್ತಿ ಮೌಲ್ಯ 23 ಲಕ್ಷ ರೂ. ಹೆಚ್ಚಳ



ಸ್ಥಿರಾಸ್ತಿ ದಾನ ಮಾಡಿದ ಪ್ರಧಾನಿ

ನವದೆಹಲಿ, ಆ. 9 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಸ್ತಿ ಮೌಲ್ಯ 23 ಲಕ್ಷ ರೂ.ಗಳಷ್ಟು ಹೆಚ್ಚಾಗಿದ್ದು, 2.23 ಕೋಟಿ ರೂ.ಗಳಿಗೆ ತಲುಪಿದೆ. ಅವರ ಬ್ಯಾಂಕ್ ಖಾತೆಗಳ ಠೇವಣಿಗಳು ಹೆಚ್ಚಾಗಿವೆ. ಆದರೆ, ಪ್ರಧಾನಿ ತಮ್ಮ ಬಳಿ ಇದ್ದ ಗಾಂಧಿನಗರದ ಜಮೀನನ್ನು ದಾನ ಮಾಡಿದ್ದಾರೆ. ಅವರ ಬಳಿ ಯಾವುದೇ ಸ್ಥಿರಾಸ್ತಿ ಇಲ್ಲ ಎಂದು ಇತ್ತೀಚೆಗೆ ದಾಖಲಿಸಲಾದ ವರದಿ ತಿಳಿಸಿದೆ.

ಪ್ರಧಾನಿ ಯಾವುದೇ ಬಾಂಡ್, ಷೇರು ಇಲ್ಲವೇ ಮ್ಯುಚುಯಲ್ ಫಂಡ್‌ಗಳಲ್ಲಿ ಹೂಡಿಕೆ ಹೊಂದಿಲ್ಲ. ಅವರು ಯಾವುದೇ ವಾಹನ ಹೊಂದಿಲ್ಲ. ಆದರೆ, 1.73 ಲಕ್ಷ ರೂ. ಮೌಲ್ಯದ ನಾಲ್ಕು ಬಂಗಾರದ ಉಂಗುರಗಳನ್ನು ಹೊಂದಿದ್ದಾರೆ. ಈ ವಿವರಗಳನ್ನು ಮಾರ್ಚ್ 31ರವರೆಗೆ ಸಂಗ್ರಹಿಸಲಾಗಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಚರಾಸ್ತಿಯ ಮೌಲ್ಯ 26.13 ಲಕ್ಷ ರೂ.ಗಳಷ್ಟು ಹೆಚ್ಚಾಗಿದೆ. ಆದರೆ, ಅವರ ಬಳಿ ಯಾವುದೇ ಸ್ಥಿರಾಸ್ತಿ ಇಲ್ಲ. ಕಳೆದ ಮಾರ್ಚ್ 31, 2021ರಂದು ಅವರು 1.1 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಹೊಂದಿದ್ದರು.

ಮಾರ್ಚ್ 31, 2022ರ ಮಾರ್ಚ್‌ನಲ್ಲಿ ಅವರ ಆಸ್ತಿ ಮೌಲ್ಯ 2.23 ಕೋಟಿ ರೂ. ಆಗಿದೆ ಎಂದು ಪ್ರಧಾನ ಮಂತ್ರಿ ಕಚೇರಿ ವೆಬ್ ತಾಣದಲ್ಲಿ ತಿಳಿಸಲಾಗಿದೆ.

ಪ್ರಧಾನಿ ಸೇರಿದಂತೆ ನಾಲ್ವರ ಸಹ ಭಾಗಿತ್ವದಲ್ಲಿ ವಸತಿ ನಿವೇಶನವೊಂದನ್ನು ಖರೀದಿಸಲಾಗಿತ್ತು. ಮೋದಿ ಅವರು 2002ರಲ್ಲಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಜಾಗ ಖರೀದಿಸಲಾಗಿತ್ತು. ಈ ಜಾಗವನ್ನು ಮೋದಿ ದಾನ ಮಾಡಿದ್ದಾರೆ.

# ಬಿಜೆಪಿಗೆ ಟಾಟಾ ಆರ್‌ಜೆಡಿ ಜೊತೆ ಸರ್ಕಾರ

## ಮಹಾಘಟಬಂಧನಕ್ಕೆ ಮುಂದಾದ ನಿತೀಶ್

**(1ನೇ ಪುಟದಿಂದ)** ಅವಕಾಶ ಕೋರಿದ್ದಾರೆ. 164 ಶಾಸಕರ ಬೆಂಬಲ ತಮಗಿದೆ ಎಂದವರು ರಾಜ್ಯಪಾಲರಿಗೆ ಪಟ್ಟಿ ನೀಡಿದ್ದಾರೆ. ಬಿಹಾರ 242 ಸದಸ್ಯರನ್ನು ಹೊಂದಿದೆ. ಬಹುಮತಕ್ಕೆ 122 ಶಾಸಕರ ಬೆಂಬಲದ ಅಗತ್ಯವಿದೆ.

ಬುಧವಾರ ಮಧ್ಯಾಹ್ನ 2 ಗಂಟೆಗೆ ಅವರು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಆರ್.ಜೆ.ಡಿ.ಯ ತೇಜಸ್ವಿ ಯಾದವ್ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಸಹ ಮೈತ್ರಿ ಸರ್ಕಾರ ಸೇರಲಿದೆ. ಆದರೆ, ಎಡಪಕ್ಷಗಳು ಹೊರಗಿನಿಂದ ಬೆಂಬಲ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಈ ರಾಜಕೀಯ ಬೆಳವಣಿಗೆಯಿಂದ ಬಿಜೆಪಿಗೆ ಹಿನ್ನಡೆಯಾಗಿದೆ. ಬಿಹಾರದಲ್ಲಿ ನಿತೀಶ್ ಕುಮಾರ್ ಬಿಜೆಪಿಗೆ ಕೈ ಕೊಡುತ್ತಿರುವುದು ಇದು ಎರಡನೇ ಬಾರಿ. ಈ ಹಿಂದೆ 2013ರಲ್ಲಿ ಅವರು ಬಿಜೆಪಿಯಿಂದ ದೂರವಾಗಿದ್ದರು.

ನರೇಂದ್ರ ಮೋದಿ ಪ್ರಧಾನ ಮಂತ್ರಿಯಾಗುವುದರ ಬಗ್ಗೆ ಆಕ್ಷೇಪ ಹೊಂದಿದ್ದ ನಿತೀಶ್ ಕುಮಾರ್, 2013ರಲ್ಲಿ ಬಿಜೆಪಿ ಜೊತೆಗಿನ ಮೈತ್ರಿ ಕಡಿದುಕೊಂಡಿದ್ದರು.

ಈ ಬಾರಿ ಜಾತಿ ಗಣತಿ, ಜನಸಂಖ್ಯಾ ನಿಯಂತ್ರಣ ಹಾಗೂ ಅಗ್ನಿಪಥ ಸೈನ್ಯ ನೇಮಕಾತಿ ಯೋಜನೆ ಸೇರಿದಂತೆ ಹಲವು ವಿಷಯಗಳ ಕಾರಣದಿಂದಾಗಿ ನಿತೀಶ್ ಕುಮಾರ್ ಅಸಮಾಧಾನ ಹೊಂದಿದ್ದಾರೆ ಎನ್ನಲಾಗಿದೆ.

ಈ ನಡುವೆ, ಉಪ ಮುಖ್ಯಮಂತ್ರಿ ತಾರ್ ಕಿಶೋರ್ ಪ್ರಸಾದ್ ಅವರ ನಿವಾಸದಲ್ಲಿ ಬಿಜೆಪಿ ಸಭೆ ನಡೆಸಿ, ಮುಂದಿನ ಹೆಜ್ಜೆ ಬಗ್ಗೆ ಚರ್ಚಿಸಿದೆ.

ಬಿಹಾರ 242 ಸದಸ್ಯರನ್ನು ಹೊಂದಿದೆ. ಆರ್.ಜೆ.ಡಿ. ಅತಿ ಹೆಚ್ಚಿನ 79 ಶಾಸಕರನ್ನು ಹೊಂದಿದೆ. ಬಿಜೆಪಿ 77 ಹಾಗೂ ಜೆಡಿಯು 44 ಶಾಸಕರನ್ನು ಹೊಂದಿದೆ. ಜಿತನ್ ರಾಮ್ ಮಾಂಝಿ ಅವರ ಹಿಂದೂಸ್ತಾನಿ ಅವಾಮ್ ಮೋರ್ಚಾದ ನಾಲ್ವರು ಸದಸ್ಯರು ಹಾಗೂ ಓರ್ವ ಸ್ವತಂತ್ರ ಶಾಸಕ ಸಹ ಜೆಡಿಯುಗೆ ಬೆಂಬಲಿಸುತ್ತಿದ್ದಾರೆ.

ಕಾಂಗ್ರೆಸ್ 19, ಸಿಪಿಐಎಂಎಲ್ (ಎಲ್) 12 ಹಾಗೂ ಸಿಪಿಐ ಮತ್ತು ಸಿಪಿಐ (ಎಂ)ಗಳ ತಲಾ ಇಬ್ಬರು ಶಾಸಕರನ್ನು ಹೊಂದಿವೆ. ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಸಹ ಒಬ್ಬರು ಶಾಸಕರನ್ನು ಹೊಂದಿದೆ.



# ಹನಗವಾಡಿ ದೇವಸ್ಥಾನಕ್ಕೆ ಧರ್ಮಸ್ಥಳದ ನೆರವು

ಮಲೇಬೆನ್ನೂರು, ಆ.9- ಹನಗವಾಡಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಗ್ರಾಮಸ್ಥರ ಕೋರಿಕೆ ಮೇರೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಡಾ. ವೀರೇಂದ್ರ ಹೆಗ್ಗಡೆ ಅವರು ಮಂಜೂರು ಮಾಡಿದ 1.50 ಲಕ್ಷ ರೂ.ಗಳ ಚೆಕ್ಕನ್ನು ಮಂಗಳವಾರ ಯೋಜನೆಯ ಜಿಲ್ಲಾ ನಿರ್ದೇಶಕ ವಿಜಯಕುಮಾರ್ ಅವರು ದೇವಸ್ಥಾನ ಸಮಿತಿಯವರಿಗೆ ನೀಡಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಹರಿಹರ ಯೋಜನಾಧಿಕಾರಿ ಗಣಪತಿ ಮಾಳಂಜಿ, ಸಂತೋಷ್ ಮತ್ತು ಇತರರು ಈ ವೇಳೆ ಹಾಜರಿದ್ದರು.

# ಅಧಿಕಾರಿಗಳಿಗೆ ಪೀಡನೆ

**(1ನೇ ಪುಟದಿಂದ)** ಸೇರಿಸಿದೆ. ಇನ್ನು ಮುಂದೆ ಈ ಒಂಭತ್ತು ಜನರ ಮಾಹಿತಿ ಹಕ್ಕು ಅರ್ಜಿಗಳನ್ನು ಸ್ವೀಕರಿಸದಂತೆ ನಿರ್ಬಂಧಿಸಿದೆ. ಗುಜರಾತ್‌ನಲ್ಲಿ ವ್ಯಕ್ತಿಗಳ ಮೇಲೆ ಆಜೀವ ಆರ್.ಟಿ.ಐ. ನಿರ್ಬಂಧ ಹೇರಿರುವುದು ಇದೇ ಮೊದಲು ಎಂದು ಹೇಳಲಾಗುತ್ತಿದೆ. ಒಂಭತ್ತು ಜನರು ಆರ್.ಟಿ.ಐ. ಅರ್ಜಿಗಳನ್ನು ದುರುದ್ದೇಶದಿಂದ ದಾಖಲಿಸಿದ್ದಾರೆ ಎಂದು ಆಯೋಗ ಹೇಳಿದೆ.

# ಅಂತರರಾಷ್ಟ್ರೀಯ ಪ್ರಯಾಣಿಕರ ವಿವರ ಸಲ್ಲಿಸಲು ಸೂಚನೆ

ನವದೆಹಲಿ, ಆ. 9 – ಅಂತರರಾಷ್ಟ್ರೀಯ ಪ್ರಯಾಣಿಕರ ವಿವರಗಳನ್ನು, ವಿಮಾನ ತೆರಳುವ 24 ಗಂಟೆ ಮುಂಚೆ ಸಲ್ಲಿಸುವಂತೆ ವಿಮಾನಯಾನ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ತಿಳಿಸಿದೆ. ನೇರ ತೆರಿಗೆ, ಸುಂಕ ಮಂಡಳಿ ಹಾಗೂ ಎನ್.ಸಿ.ಟಿ.ಸಿ.-ಪಿ ಸಂಸ್ಥೆಗಳ ಜೊತೆ ಈ ಮಾಹಿತಿ ಹಂಚಿಕೊಳ್ಳಲಾಗುವುದು. ವಂಚನೆ ಮಾಡಿದವರನ್ನು ಪತ್ತೆ ಮಾಡಲು ಈ ಕ್ರಮ ನೆರವಾಗಲಿದೆ. ಪಿ.ಎನ್.ಆರ್. ಸಂಖ್ಯೆ, ಟಿಕೆಟ್ ಕಾಯ್ದಿರಿಸಿದ ದಿನಾಂಕ ಸೇರಿದಂತೆ ಹಲವಾರು ವಿವರಗಳನ್ನು ಪಡೆಯಲಾಗುವುದು.

# ಕುಳಗಟ್ಟೆ : ರಸ್ತೆಯಲ್ಲಿ ನಾಟಿ ಮಾಡಿ ಪ್ರತಿಭಟನೆ



ಹುಣಸಘಟ್ಟ, ಆ. 9 - ಸಾಸ್ವೇಹಳ್ಳಿ ಹೋಬಳಿಯ ಕುಳಗಟ್ಟೆ ಗ್ರಾಮದ ಅಣ್ಣೆದಿಗ್ಗೆ ಜನವಸತಿ ಪ್ರದೇಶದ ರಸ್ತೆಯೊಂದು ನಿರಂತರ ಮಳೆಯಿಂದ ಕೆಸರು ಗದ್ದೆಯಂತಾಗಿದೆ. ಜನರು, ವಿದ್ಯಾರ್ಥಿಗಳು, ಹಾಲು ಹಾಕುವವರು ಈ ರಸ್ತೆಯಲ್ಲಿ ಓಡಾಡುವುದೇ ಕಷ್ಟವಾಗಿದೆ.

ಗ್ರಾಮ ಪಂಚಾಯಿತಿಗೆ ಆರು ತಿಂಗಳಿನಿಂದ ಅರ್ಜಿ ನೀಡುತ್ತಿದ್ದೇವೆ. ಅದಕ್ಕೆ ಅವರು ಈ ರಸ್ತೆ ನೀರಾವರಿ ನಿಗಮಕ್ಕೆ ಸೇರಿದೆ ಎಂದರು. ಈ ರಸ್ತೆ ಅಭಿವೃದ್ಧಿಗೆ ಅನುದಾನ ನೀಡಲು ಸಾಧ್ಯವಿಲ್ಲ ಎಂದರು. ನಂತರ ಸಾಸ್ವೆಹಳ್ಳಿ ನೀರಾವರಿ ಇಲಾಖೆಗೆ ಪತ್ರ ಬರೆದಿರುವುದಾಗಿ ಹೇಳುತ್ತಿದ್ದಾರೆ ಎಂದು ತಮ್ಮ ಅಳಲನ್ನು ತೋಡಿಕೊಂಡರು ಮಂಜುಳಮ್ಮ.

ನೀರಾವರಿ ಇಲಾಖೆಯ ಅಧಿಕಾರಿಗಳು ರಸ್ತೆ ದುರಸ್ತಿಗೆ ತಮ್ಮ ಇಲಾಖೆಯಲ್ಲಿ ಯಾವುದೇ ಅನುದಾನವಿಲ್ಲ. ನೀವು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ರಸ್ತೆ ದುರಸ್ತಿಗೆ ಅವಕಾಶ ಇದೆ. ಕ್ರಿಯಾ ಯೋಜನೆಯನ್ನು ಸ್ಥಳೀಯ ಗ್ರಾ.ಪಂ.ನಲ್ಲಿ ಮಾಡಿಸಿಕೊಂಡು ಬರಲು ಹೇಳುತ್ತಿದ್ದಾರೆ. ಅಧಿಕಾರಿಗಳೇ ನಮ್ಮ ದಾರಿ ತಪ್ಪಿಸಿದರೆ ಹೇಗೆ ? ಜನ ಪ್ರತಿನಿಧಿಗಳು, ಸ್ಥಳೀಯ ಮುಖಂಡರು, ಸಂಬಂಧಿಸಿದ ಅಧಿಕಾರಿಗಳು ನಮಗೆ ಪರಿಹಾರ ನೀಡಿ ಎಂದು ಮನವಿ ಮಾಡಿದರು.

ಹಾಲೇಶ್, ರವಿ, ಚಿದಾನಂದಯ್ಯ, ಲೋಕೇಶ್, ಚೇತನ್ ಇದ್ದರು.

# ಮಂಗಳ ಗೌರಿ ವ್ರತಾಚರಣೆಯಿಂದ ಇಷ್ಟಾರ್ಥ ಸಿದ್ಧಿ



ಸಾಸ್ವೆಹಳ್ಳಿ, ಆ. 9 - ಶ್ರಾವಣ ಮಾಸದ ಎರಡನೇ ಮಂಗಳವಾರ ದಂದು ಶ್ರೀ ಮಂಗಳ ಗೌರಿ ವ್ರತವನ್ನು ಸಾಸ್ವೇಹಳ್ಳಿ ಸೇರಿದಂತೆ ಹೋಬಳಿ ವ್ಯಾಪ್ತಿಯಲ್ಲಿ ಆಚರಿಸಲಾಯಿತು.

ಸಾಮಾನ್ಯವಾಗಿ ಶ್ರಾವಣ ಮಾಸ ಬಂತು ಎಂದರೆ ಪ್ರತಿ ವಾರ ಪೂರ್ತಿ ಪೂಜಾವ್ರತಗಳಲ್ಲಿ ನಿರತರಾಗಿರುವ ಸುಮಂಗಲಿಯರು ಒಬ್ಬೊಬ್ಬರೂ ಒಂದೊಂದು ದಿವಸ ಇಷ್ಟಾರ್ಥ ಸಿದ್ದಿಗೆ ವಿವಿಧ ದೇವತೆಗಳ ಪೂಜಾ ಕಾರ್ಯಗಳಲ್ಲಿ ವಿವಿಧ ವ್ರತಗಳನ್ನು ಕೈಗೊಳ್ಳುವ ಹೆಣ್ಣು ಮಕ್ಕಳು ದೇವರನ್ನು ಪೂಜಿಸುತ್ತಾರೆ. ಹಾಗಾಗಿ ಶ್ರಾವಣ ಮಾಸ ಧಾರ್ಮಿಕ ವೈಶಿಷ್ಟ್ಯತೆಗೆ ಪಾತ್ರವಾಗಿದೆ ಎಂದು ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶ್ರಾವಣ ಮಾಸದಲ್ಲಿ ಮನೆಗಳಲ್ಲಿ ಪೂಜೆ, ಪುನಸ್ಕಾರಗಳನ್ನು ಆಚರಿಸುವ ಮಹಿಳೆಯರು, ಪ್ರತಿ ಮಂಗಳವಾರ ಮತ್ತು ಶುಕ್ರವಾರ ದೇವಿ ಪೂಜೆಯನ್ನು ಮಾಡಿ, ಗ್ರಾಮೀಣ ಅಕ್ಕಪಕ್ಕದ ಮನೆಗಳ ಮುತ್ತೈದೆಯರನ್ನು ಕರೆದು ಎಲೆ, ಅಡಿಕೆ, ಬಾಳೆಹಣ್ಣು, ತಂಬಿಟ್ಟು ಉಡಿ ತುಂಬುವುದು ಸಂಪ್ರದಾಯ ಪೂರ್ವಜರ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಗೃಹಗಳಲ್ಲಿ ಇಷ್ಟಾರ್ಥ ಸಿದ್ದಿ ಮತ್ತು ಸಂಕಷ್ಟ ನಿವಾರಣಾರ್ಥವಾಗಿ ಮುತ್ತೈದೆ ಹೆಣ್ಣು ಮಕ್ಕಳು ಮಂಗಳಗೌರಿ, ಶುಕ್ರಗೌರಿ ವ್ರತದಲ್ಲಿ ಗೌರಿಯನ್ನು ಪೂಜಿಸುತ್ತಾರೆ ಎಂದರು.

ಮನೆ ಮತ್ತು ದೇವರ ಕೋಣೆಯನ್ನು ಸ್ವಚ್ಛಗೊಳಿಸಿ, ಅಲಂಕರಿಸಲಾಗುವುದು. ದೇವರ ಕೋಣೆಯನ್ನು ರಂಗೋಲಿ, ದೀಪ, ಹೂವುಗಳಿಂದ ಅಲಂಕರಿಸಿ, ಗೌರಿ ಮೂರ್ತಿಗೆ ಕಲಶವನ್ನು ಸ್ಥಾಪಿಸಿ, ಸೀರೆ ಉಡಿಸಿ ಫಲ-ಪುಷ್ಪಗಳಿಂದ ಮಂಗಳಗೌರಿ ವ್ರತದ ಪುಸ್ತಕವನ್ನು ಪಾರಾಯಣ ಮಾಡಿ ಪೂಜಾ ಕಾರ್ಯವನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಗುತ್ತದೆ ಎಂದು ಕುಳಗಟ್ಟೆ ಗ್ರಾಮದ ಶಕುಂತಲಮ್ಮ ಮುರಿಗೇಶಯ್ಯ ತಿಳಿಸಿದರು.

ಹೊಸದಾಗಿ ಮದುವೆಯಾದ ಹೆಣ್ಣುಮಕ್ಕಳು, ಮದುವೆಯಾಗಿ ಐದು ವರ್ಷ ಆಗಿರುವ ಮುತ್ತೈದೆಯರು ಸೇರಿ ಪೂಜೆ ಮಾಡಿ ಮಂಗಳಗೌರಿ ಪೂಜಿಸಲು ಬಂದ ನೆರೆ-ಹೊರೆಯ ಮುತ್ತೈದೆಯರು ಮನೆಯಲ್ಲಿಯೇ ಆಚರಣೆ ಮಾಡುವ ಮೂಲಕ ಬಾಗಿನ ನೀಡಲಾಗುತ್ತದೆ ಎಂದು ಬಸಮ್ಮ ನಂಜುಂಡಯ್ಯ ತಿಳಿಸಿದರು.

# ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಮರ್ಪಣೆ





ದಾವಣಗೆರೆ, ಆ.9- ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳುವಳಿ ನೆನಪಿಗಾಗಿ ಜಿಲ್ಲಾಡಳಿತದ ವತಿಯಿಂದ ಸ್ವಾತಂತ್ರ್ಯ ಯೋಧರನ್ನು ಅವರ ಮನೆಗಳಿಗೆ ತೆರಳಿ ಸನ್ಮಾನಿಸಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮನೆಗಳಿಗೆ ಭೇಟಿ ನೀಡಿ, ಶಾಲು ಹಾರ ಹಾಗೂ ಹಣ್ಣಿನ ಬುಟ್ಟಿಗಳನ್ನು ನೀಡಿ ಹೋರಾಟದ ದಿನಗಳನ್ನು ಮೆಲುಕು ಹಾಕಲಾಯಿತು.

ದಾವಣಗೆರೆ ಕುಂಬಾರ ಪೇಟೆಯ ಮರುಳ ಸಿದ್ದಪ್ಪ ಬಿನ್ ಸಿದ್ದಪ್ಪ, ಬಿ.ಹಾಲಪ್ಪ, ವಿದ್ಯಾನಗರದ ಬಿ.ಎಂ.ಶಿವಲಿಂಗ ಸ್ವಾಮಿ, ಎಸ್.ಎಸ್. ಬಡಾವಣೆಯ ಟಿ.ಎನ್. ಸಿದ್ದರಾಮಪ್ಪ, ತರಳಬಾಳು ಬಡಾವಣೆಯ ತಿಪ್ಪೇಸ್ವಾಮಿ ಬಿನ್ ಕರಿಸಿದ್ದಪ್ಪ, ನೀಲಪ್ಪ ಬಿನ್ ಮಲ್ಲಪ್ಪ, ಶಾಂತ ವೀರಯ್ಯ ಬಿನ್ ಮುರುಗಯ್ಯ, ಚನ್ನಬಸಪ್ಪ ಬಿನ್ ಮಲ್ಲಪ್ಪ ಇವರುಗಳನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ,ಮಾಜಿ ಮೇಯರ್ ಎಸ್.ಟಿ.ವೀರೇಶ್, ಸದಸ್ಯರಾದ ಕೆ. ಪ್ರಸನ್ನಕುಮಾರ್, ಗೀತಾ ದಿಳ್ಯೆಪ್ಪ, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಇತರರು ಉಪಸ್ಥಿತರಿದ್ದರು.

# ಬಿರುಕು ಬಿಟ್ಟ ಹದಡಿ ಕೆರೆ ಏರಿ ಪರಿಶೀಲಿಸಿದ ಎಸ್ಸೆಸ್



ದಾವಣಗೆರೆ, ಆ.9- ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಇಂದು ಅಧಿಕಾರಿಗಳೊಂದಿಗೆ ಹದಡಿ ಕೆರೆಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಕಳೆದ ಆರು ತಿಂಗಳ ಹಿಂದೆ ಕೆರೆ ಏರಿಯಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಅದನ್ನು ತಾತ್ಕಾಲಿಕವಾಗಿ ದುರಸ್ತಿ ಪಡಿಸಲಾಗಿತ್ತು. ಆದರೆ ಹೆಚ್ಚಿನ ಮಳೆ ಆಗಿ ಕೆರೆಯಲ್ಲಿ ಹೆಚ್ಚು ನೀರು ಶೇಖರಣೆ ಆಗಿರುವುದರಿಂದ ಇದೀಗ ಮತ್ತೆ ಕೆರೆ ಏರಿಯಲ್ಲಿ ಬಿರುಕು ಕಾಣಿಸಿಕೊಂಡಿದೆ ಎಂದು ಎಸ್ಸೆಸ್ ತಿಳಿಸಿದರು.

ಈಗಾಗಲೇ ಕೆರೆ ಏರಿ ದುರಸ್ತಿಗಾಗಿ ನೀರಾವರಿ ಇಲಾಖೆಯಿಂದ 1.70 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಶೀಘ್ರದಲ್ಲೇ ಕಾಮಗಾರಿಯನ್ನು ಪ್ರಾರಂಭಿಸುವಂತೆ ಸೂಚಿಸಲಾಗಿದೆ ಎಂದ ಅವರು, ಅಲ್ಲಿಯವರೆಗೆ ಕೆರೆ ಏರಿ ಮೇಲೆ ಭಾರೀ ವಾಹನಗಳನ್ನು ನಿಷೇಧಿಸುವಂತೆಯೂ ಅಧಿಕಾರಿಗಳಿಗೆ ತಿಳಿಸಿದರು.

ಕೆರೆ ಏರಿಯನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಅಭಿವೃದ್ಧಿ ಪಡಿಸಲು ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳ ಸಹಯೋಗದಡಿ ಕ್ರಿಯಾ ಯೋಜನೆ ತಯಾರಿಸುವಂತೆ ತಿಳಿಸಿದ ಅವರು ಸರ್ಕಾರದಿಂದ ಈ ಕ್ರಿಯಾ ಯೋಜನೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಿಸಲಾಗುವುದು ಎಂದರು.

ನೀರಾವರಿ ಇಲಾಖೆ ಕಾರ್ಯಪಾಲಕ ಅಭಿಯಂತರ ಮಂಜುನಾಥ್, ಲೊಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ವಿಜಯ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರ ನರೇಂದ್ರಬಾಬು, ಸಹಾಯಕ ಅಭಿಯಂತರ ವೀರಪ್ಪ, ಮುಖಂಡರುಗಳಾದ ಕುಕ್ಕುವಾಡ ಮಲ್ಲೇಶಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಎನ್. ಮಂಜುನಾಥ್, ಮಾಜಿ ಸದಸ್ಯ ಆರನೇಕಲ್ಲು ಮಂಜಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಬಿಸಲೇರಿ ಈರಣ್ಣ, ಶಿರಮಗೊಂಡನಹಳ್ಳಿ ರುದ್ರೇಶ್, ಹದಡಿಯ ಮಹಾಂತೇಶ್, ಎಂ.ಡಿ.ನಿಂಗಪ್ಪ, ಕುಕ್ಕವಾಡ ಅಂಜಿನಪ್ಪ ಮತ್ತಿತರರಿದ್ದರು.

# ಹರಪನಹಳ್ಳಿ : ರಾಜ್ಯ ಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನ

ಹರಪನಹಳ್ಳಿ, ಆ.9- ಪಟ್ಟಣದ ಅಧಿಕಾರಿಗಳ ಮನೋರಂಜನಾ ಕೇಂದ್ರದ ವತಿಯಿಂದ 75 ನೇ ಅಮೃತ ಮಹೋತ್ಸವದ ನಿಮಿತ್ತ ರಾಜ್ಯಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನಿಸಿ, ಗೌರವಿಸಲಾಗುವುದು ಎಂದು ಅಧಿಕಾರಿಗಳ ಮನೋರಂಜನಾ ಕೇಂದ್ರದ ಅಧ್ಯಕ್ಷ ಕೆ.ಲಿಂಗಾನಂದ ತಿಳಿಸಿದ್ದಾರೆ.

ಇದೇ ದಿನಾಂಕ 15ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಸ್ವಾತಂತ್ರ್ಯ ದಿನಾಚರಣೆಯ 75ನೇ ಅಮೃತ ಮಹೋತ್ಸವ ಸಮಾರಂಭ ಆಚರಿಸಲಾಗುತ್ತಿದ್ದು, ಪ್ರತಿ ವರ್ಷ ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಲಾಗುತ್ತಿತ್ತು.

ಆದರೆ, ಈ ಬಾರಿ 2021- 22 ನೇ ಸಾಲಿನಲ್ಲಿ ಸಾಧನೆ ಮಾಡಿದ ರಾಜ್ಯ ಮಟ್ಟದ ಕ್ರೀಡಾ ಪಟುಗಳಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ. ವಿವರಕ್ಕೆ ಸಂಪರ್ಕಿಸಿ : 9448877052.

# ಮಳೆಹಾನಿ ಪರಿಹಾರ ವಿಳಂಬ ಸಲ್ಲ

## ಮಳೆ ಹಾನಿ ಕುರಿತ ಸಭೆಯಲ್ಲಿ ಉಸ್ತುವಾರಿ ಸಚಿವ ಭೈರತಿ ಬಸವರಾಜ್



ದಾವಣಗೆರೆ, ಜು. 9- ಮಳೆಯಿಂದಾಗಿ ಮನೆ ಕಳೆದುಕೊಂಡ ಎಲ್ಲಾ ಸಂತ್ರಸ್ಥರಿಗೆ ಆ. 15ರೊಳಗಾಗಿ ಪರಿಹಾರ ವಿತರಣೆ ಮಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಜಿಲ್ಲೆಯ ಎಲ್ಲ ತಹಸೀಲ್ದಾರರಿಗೆ ಸೂಚಿಸಿದರು.

ಮಳೆ ಹಾನಿ ಕುರಿತಂತೆ ಮಂಗಳವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆಸಿದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಮಳೆ ಹಾನಿ ಪರಿಹಾರ ಕೈಗೊಳ್ಳಲು ಜಿಲ್ಲೆಗೆ 15 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ 1,311 ಮನೆಗಳಿಗೆ ನಷ್ಟವಾಗಿದೆ. ಎಲ್ಲಾ ಮನೆಗಳಿಗೂ ಇನ್ನೆರಡು ದಿನಗಳಲ್ಲಿ ಪರಿಹಾರ ವಿತರಣೆ ಮಾಡಬೇಕು. ಚನ್ನಗಿರಿ ತಾಲ್ಲೂಕಿನ ತಹಶೀಲ್ದಾರರು ಸೇರಿದಂತೆ ಜಿಲ್ಲೆಯ ಕೆಲ ತಹಸೀಲ್ದಾರರು ಮನೆ ಕಳೆದುಕೊಂಡ ಸಂತ್ರಸ್ಥರಿಗೆ ಇನ್ನೂ ಪರಿಹಾರ ನೀಡದೇ ಇರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಸಚಿವರು, ಮನೆ ಕಳೆದುಕೊಂಡವರಿಗೆ ಸಕಾಲಕ್ಕೆ ಪರಿಹಾರ ನೀಡದೇ ಇದ್ದರೆ ಸರ್ಕಾರ ತಕ್ಷಣ ನೆರವಿಗೆ ಬಂದಿಲ್ಲ ಎಂಬ ಭಾವನೆ ಜನರಲ್ಲಿ ಮೂಡುತ್ತದೆ. ಇದರಿಂದ ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ. ಪರಿಹಾರ ವಿತರಣೆಗೆ ಸಾಕಷ್ಟು ಅನುದಾನ ನೀಡಿದರೂ ಸಕಾಲದಲ್ಲಿ ನೀಡದೇ ಇರುವುದನ್ನು ಸಹಿಸುವುದಿಲ್ಲ ಎಂದರು.

ಜಿಲ್ಲೆಯಲ್ಲಿ ಸಂತ್ರಸ್ಥರಿಗಾಗಿ ತೆರೆದಿರುವ ಕಾಳಜಿ ಕೇಂದ್ರಗಳಲ್ಲಿ ಗುಣಮಟ್ಟದ ಆಹಾರ ಒದಗಿಸಬೇಕು. ಸರ್ಕಾರದ ಮಾರ್ಗಸೂಚಿಯಲ್ಲಿ ಏನಿದೆಯೋ ಅದೇ ರೀತಿ ಎಲ್ಲ ಸೌಲಭ್ಯವನ್ನು ಒದಗಿಸಿಕೊಟ್ಟು ಸರ್ಕಾರ ತಮ್ಮ ಸಹಾಯಕ್ಕೆ ಇದೆ ಎಂಬ ಭರವಸೆ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.

**ಮನೆ ಹಾನಿ ವಿವರ:** ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡಿ, ಪೂರ್ವ ಮುಂಗಾರು ಹಾಗೂ ಜುಲೈ, ಆಗಸ್ಟ್ ತಿಂಗಳಲ್ಲಿ ಚನ್ನಗಿರಿ ತಾಲ್ಲೂಕಿನಲ್ಲಿ 381, ದಾವಣಗೆರೆ 175, ಹರಿಹರ 173, ಹೊನ್ನಾಳಿ 21, ಜಗಳೂರು 161 ಹಾಗೂ ನ್ಯಾಮತಿಯಲ್ಲಿ 205 ಮನೆಗಳು ದುರಸ್ತಿಗೆ ಒಳಗಾಗಿದ್ದು, ಒಟ್ಟು ದುರಸ್ತಿಗಳಗಾದ ಮನೆಗಳಲ್ಲಿ 52 ಎ, 108 ಬಿ, 153 ಸಿ ವರ್ಗದ ಮನೆಗಳು ಸೇರಿವೆ. ಸಂಪೂರ್ಣ, ಭಾಗಶಃ ಹಾನಿ, ಹಾನಿ ಉಂಟಾಗಿರುವ ಮನೆಗಳಿದ್ದು ಒಟ್ಟು 1311 ಮನೆಗಳಿಗೆ ನಷ್ಟವಾಗಿದೆ ಎಂದರು.

ಪೂರ್ವ ಮುಂಗಾರಿನಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆಗಳು ಸೇರಿ 4813.90 ಹೆಕ್ಟೇರ್ ಹಾನಿ ಅಂದಾಜಿಸಲಾಗಿ ಇದಕ್ಕೆ ಸರ್ಕಾರ ದಿಂದ ಮಂಜೂರಾದ 6.11 ಕೋಟಿ ಪರಿಹಾರವನ್ನು 11032 ರೈತರಿಗೆ ನೀಡಲಾಗಿದೆ. ಮತ್ತು ಜುಲೈ, ಆಗಸ್ಟ್‌ನಲ್ಲಿ 12108.74 ಹೆಕ್ಟೇರ್ ಹಾನಿಯಾಗಿದೆ ಎಂದು ಸಮೀಕ್ಷೆ ಮಾಡಲಾಗಿದೆ. ಮಳೆ ನಿಂತ ತಕ್ಷಣ ಹಾನಿಯ ನಿಖರ ಅಂಕಿ ಅಂಶಗಳ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಸರ್ಕಾರಕ್ಕೆ ವರದಿ ಕಳುಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

**ಬೆಳೆ ಹಾನಿ:** ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಮಾತನಾಡಿ, ಜಿಲ್ಲೆಯಲ್ಲಿ ಆಗಸ್ಟ್ 8 ವರೆಗೆ ವಾಡಿಕೆ ಮಳೆಗಿಂತ ಶೇ.106 ರಷ್ಟು ಅಧಿಕ ಮಳೆಯಾಗಿದೆ. ಜುಲೈ ತಿಂಗಳಲ್ಲಿ ಸುರಿದ ಮಳೆಗೆ 7305 ಹೆಕ್ಟೇರ್ ಕೃಷಿ ಬೆಳೆ ಹಾನಿಯಾಗಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಆಗಸ್ಟ್ ತಿಂಗಳು ಈವರೆಗೆ 3906 ಹೆಕ್ಟೇರ್ ಅಂದಾಜು ಬೆಳೆ ಹಾನಿಯಾಗಿದ್ದು, ಸಮೀಕ್ಷೆ ಮುಂದುವರಿದಿದೆ ಮಳೆ ಇರುವ ಕಾರಣದಿಂದ ಸಮೀಕ್ಷೆಗೆ ಸ್ವಲ್ಪ ಅಡ್ಡಿಯಾಗಿದೆ. ಈವರೆಗೆ ಜಿಲ್ಲೆಯಲ್ಲಿ ಒಟ್ಟು 11,211 ಹೆಕ್ಟೇರ್ ಬೆಳೆ ಹಾನಿಯಾಗಿದೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರಾಘವೇಂದ್ರ ಪ್ರಸಾದ್ ಮಾತನಾಡಿ, ಅತಿವೃಷ್ಟಿಯಿಂದ ಜುಲೈ ತಿಂಗಳಲ್ಲಿ 157.9 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಆಗಸ್ಟ್ ತಿಂಗಳಲ್ಲಿ 639 ಹೆಕ್ಟೇರ್ ತೋಟಗಾರಿಕೆ ಬೆಳೆ ಹಾನಿಯಾಗಿದ್ದು, ಸಮೀಕ್ಷೆ ಮುಂದುವರೆದಿದೆ ಎಂದರು.

ಬೆಳೆ ಹಾನಿ ಮಾಹಿತಿ ಆಲಿಸಿದ ಸಚಿವರು, ಮಳೆ ಕಡಿಮೆಯಾದ ಬಳಿಕ ಕೃಷಿ ಮತ್ತು ತೋಟಗಾರಿಕೆ, ಕಂದಾಯ ಇಲಾಖೆ ಅಧಿಕಾರಿಗಳು ಶೀಘ್ರ ಸಮೀಕ್ಷೆ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿಕೊಡಬೇಕು ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಸುರಿದ ಅಧಿಕ ಮಳೆಯಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ 126 ಕೊಠಡಿಗಳಿಗೆ ಹಾನಿಯಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕ ಜಿ.ಆರ್.ತಿಪ್ಪೇಶ್ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ತಾವೇ ತಾಲ್ಲೂಕುಗಳಿಗೆ ಸ್ವತಃ ಭೇಟಿ ನೀಡಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದರು. ಅದೇ ರೀತಿ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ 1667 ವಿದ್ಯುತ್ ಕಂಬಗಳು ಹಾಗೂ 84 ವಿದ್ಯುತ್ ಪರಿವರ್ತಕಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಲೋಕೋಪಯೋಗಿ ಇಲಾಖೆ ಅಧಿಕಾರಿ ಮಾತನಾಡಿ, ಅತಿವೃಷ್ಟಿಯಿಂದಾಗಿ ರಾಷ್ಟ್ರೀಯ ಹೆದ್ದಾರಿ 7.5ಕಿ.ಮೀ., ರಾಜ್ಯ ಹೆದ್ದಾರಿ 48.75ಕಿ.ಮೀ., ಜಿಲ್ಲಾ ಮುಖ್ಯ ರಸ್ತೆ 152ಕಿ.ಮೀ. ಹಾಗೂ 27 ಮೋರಿ, ಸೇತುವೆಗಳಿಗೆ ಹಾನಿಯಾಗಿದೆ. ಒಟ್ಟು 12.3ಕೋಟಿ ರೂ. ಅನುದಾನ ನೀಡಿದ್ದು ದುರಸ್ತಿಗೆ 31ಕೋಟಿ ರೂ. ಅಗತ್ಯವಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಮಳೆ ಕಡಿಮೆಯಾಗುತ್ತಿದ್ದಂತೆ ಕೂಡಲೇ ರಸ್ತೆ ದುರಸ್ತಿಗೆ ಸಿದ್ಧತೆ ಮಾಡಿಕೊಳ್ಳಲು ಆದೇಶಿಸಿದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 13 ರಿಂದ 15ರ ವರೆಗೆ ಪ್ರತಿ ಮನೆಯಲ್ಲಿಯೂ ರಾಷ್ಟ್ರಧ್ವಜವನ್ನು ಹಾರಿಸಲಾಗುತ್ತದೆ. ಈ ವೇಳೆ ಧ್ವಜ ಸಂಹಿತೆಯಂತೆ ಹಾರಿಸಲು ಮತ್ತು ಧ್ವಜ ಇಳಿಸಿದ ನಂತರ ಸುರಕ್ಷಿತವಾಗಿ ಇಡಲು ಸಹ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಎಲ್ಲಾ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕೆಂದು ಸೂಚನೆ ನೀಡಿ ಕೆಲವು ಕಿಡಿಗೇಡಿಗಳು ಇಂತಹ ಅವಕಾಶವನ್ನು ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಹೆಚ್ಚುವರಿ ಜಿಲ್ಲಾ ರಕ್ಷಣಾಧಿಕಾರಿ ಆರ್.ಬಿ.ಬಸರಗಿ ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

### ಗೈರಾದ ಅಧಿಕಾರಿಗಳಿಗೆ ನೋಟೀಸ್‌ಗೆ ಸೂಚನೆ

ಮಳೆ ಹಾನಿ ಕುರಿತ ಅಧಿಕಾರಿಗಳ ಸಭೆಯಲ್ಲಿ ಬೆಸ್ಕಾಂ ಅಧಿಕಾರಿಗಳು, ಮೀನುಗಾರಿಕೆ ಇಲಾಖೆ ಅಧಿಕಾರಿಗಳು ಬಾರದೇ ಇರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಸಚಿವ ಭೈರತಿ ಬಸವರಾಜ್, ಮಳೆ ಹಾನಿ ಪರಿಶೀಲನೆಗೆ ತಾವು ಬೆಂಗಳೂರಿನಿಂದ ಬಂದರೂ ಅಧಿಕಾರಿಗಳು ಸಭೆಗೆ ಗೈರಾಗುತ್ತಾರೆಂದರೆ ಇದು ಅವರ ಅಸಡ್ಡೆತನ ತೋರಿಸುತ್ತದೆ. ಸಭೆಗೆ ಗೈರಾದ ಎಲ್ಲ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ಜಿಲ್ಲಾಧಿಕಾರಿಯವರಿಗೆ ಸೂಚಿಸಿದರು.

## ಇಂದು ಶಿಲಾಮೂರ್ತಿಗಳ ಸ್ಥಾಪನೆ, ಪ್ರಾಣ ಪ್ರತಿಷ್ಠಾಪನೆ, ದೇವಾಲಯಗಳ ಅನಾವರಣ



ಶಾಮನೂರು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಇಂದು ಸಿದ್ಧಿ-ಬುದ್ಧಿ ಮಹಾಗಣಪತಿ, ಶ್ರೀ ಬನ್ನಿಮಹಾಂಕಾಳಮ್ಮ ಹಾಗೂ ನಾಗದೇವತೆ ಶಿಲಾಮೂರ್ತಿಗಳ ಸ್ಥಾಪನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಮತ್ತು ದೇವಾಲಯಗಳ ಅನಾವರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಬೆಳಿಗ್ಗೆ ಪ್ರಾತ:ಕಾಲದಲ್ಲಿ ಶಿಲಾಮೂರ್ತಿಗೆ ವಿಶೇಷ ರುದ್ರಾಭಿಷೇಕ, ಶತನಾಮಾವಳಿ ಪೂಜೆ ನಡೆದು, ಬೆಳಿಗ್ಗೆ 8 ರಿಂದ 9 ರವರೆಗೆ ಪ್ರಾಣ ಪ್ರತಿಷ್ಠಾಪನೆ, ಮಹಾಮಂಗಳಾರತಿಯೊಂದಿಗೆ ಶ್ರೀ ಸ್ವಾಮಿ ದರ್ಶನ, ನಂತರ ಮಧ್ಯಾಹ್ನ 12.30 ರಿಂದ ಅನ್ನ ದಾಸೋಹ ನಡೆಯಲಿದೆ.

## ಪ್ರಸಕ್ತ ಸಾಲಿನ ಕೃಷಿ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಆ.9- ಕೃಷಿ ಪ್ರಶಸ್ತಿ ಬೆಳೆ ಸ್ಪರ್ಧೆಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಜಿಲ್ಲಾ ಮಟ್ಟಕ್ಕೆ ಮುಸುಕಿನಜೋಳ (ಮಳೆಯಾಶ್ರಿತ) ಬೆಳೆಯನ್ನು ನಿಗದಿಪಡಿಸಲಾಗಿದೆ. ತಾಲ್ಲೂಕು ಮಟ್ಟಕ್ಕೆ ದಾವಣಗೆರೆ, ಚನ್ನಗಿರಿ, ಹರಿಹರ ಹಾಗೂ ಹೊನ್ನಾಳಿ ತಾಲ್ಲೂಕುಗಳಿಗೆ ಭತ್ತ (ನೀರಾವರಿ) ಮತ್ತು ನ್ಯಾಮತಿ ತಾಲ್ಲೂಕಿಗೆ ಶೇಂಗಾ (ಮಳೆಯಾಶ್ರಿತ) ಹಾಗೂ ಜಗಳೂರು ತಾಲ್ಲೂಕಿಗೆ ಮುಸುಕಿನಜೋಳ (ಮಳೆಯಾಶ್ರಿತ) ಬೆಳೆಗಳನ್ನು ನಿಗದಿಪಡಿಸಲಾಗಿದೆ. ಪ್ರಶಸ್ತಿಗೆ ಅರ್ಜಿ ಸಲ್ಲಿಸಲು ಮುಂಗಾರು ಹಂಗಾಮಿಗೆ ಆಗಸ್ಟ್ 31 ಹಾಗೂ ಹಿಂಗಾರು ಹಂಗಾಮಿಗೆ ನವೆಂಬರ್ 30 ಕೊನೆಯ ದಿನವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಕೃಷಿ ಪ್ರಶಸ್ತಿಗೆ ಪ್ರತ್ಯೇಕವಾಗಿ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೂಡಲೇ ರೈತ ಬಾಂಧವರು ನಿಗದಿತ ದಿನಾಂಕದೊಳಗೆ ಕೃಷಿ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ/ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಕಲುಷಿತ ನೀರು ಪೂರೈಕೆ ; ಪಾಲಿಕೆ ಆಡಳಿತದ ವಿರುದ್ಧ ಗಡಿಗುಡಾಳ್ ಆಕ್ರೋಶ



ದಾವಣಗೆರೆ, ಆ. 9 - ನಗರಕ್ಕೆ ಸರಬರಾಜು ಮಾಡುತ್ತಿರುವ ನೀರು ಕಲುಷಿತಗೊಂಡಿದ್ದು, ಕುಡಿಯುವ ನೀರಿಗಾಗಿ ಜನರು ಪರದಾಡುವಂತಾಗಿದೆ. ಕೊಳಚೆ ನೀರು ಬರುತ್ತಿದ್ದು, ಕುಡಿಯಲು ಹಾಗೂ ಸ್ನಾನಕ್ಕೆ ಬಳಸಲು ಸಹ ಯೋಗ್ಯವಾಗಿಲ್ಲ. ಪಾಲಿಕೆಯ ನಿರ್ಲಕ್ಷ್ಯಕ್ಕೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ ಎಂದು ಪಾಲಿಕೆ ವಿರೋಧ ಪಕ್ಷದ ನಾಯಕ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಹೇಳಿದ್ದಾರೆ.

ನಗರಕ್ಕೆ ನೀರು ಪೂರೈಸುವ ಟಿ. ವಿ. ಸ್ಟೇಷನ್ ಕೆರೆಯಲ್ಲಿ ಶುದ್ಧೀಕರಿಸದ ಹಾಗೂ ಕುಂದುವಾಡ ಕೆರೆಯಲ್ಲಿ ಇನ್ನೂ ನೀರು ಸಂಗ್ರಹವಾಗದ ಕಾರಣ ನದಿಯ ನೀರನ್ನು ನೇರವಾಗಿ ಸರಬರಾಜು ಮಾಡುತ್ತಿರುವುದೇ ಇದಕ್ಕೆ ಕಾರಣ. ಕಲುಷಿತ ನೀರು ಸೇವಿಸಿ ಹಲವು ಮಂದಿ ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಶೀತ, ಜ್ವರ, ಕೆಮ್ಮು, ಮೈ ಕೈ ನೋವು, ಸುಸ್ತು ಸೇರಿದಂತೆ ಹಲವು ರೀತಿಯಲ್ಲಿ ಸಂಕಷ್ಟ ಅನುಭವಿಸುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿತನ ಹಾಗೂ ಆಡಳಿತ ವರ್ಗದ ನಿರ್ಲಕ್ಷ್ಯ ಎಂದು ಆರೋಪಿಸಿದ್ದಾರೆ.

ಮಲೆನಾಡು ಹಾಗು ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿದೆ. ಈ ನೀರನ್ನು ಸಂಸ್ಕರಣೆ ಮಾಡದೇ ನೇರವಾಗಿ ಪೈಪ್ ಗಳ ಮೂಲಕ ನಲ್ಲಿಗಳಲ್ಲಿ ನೀರು ಪೂರೈಸಲಾಗುತ್ತಿದೆ. ಇದರಿಂದಾಗಿ ಜನರು ನೀರು ನೋಡಿದಾಕ್ಷಣ ವಾಕರಿಕೆ ಬರುವಂತಾಗಿದೆ. ಕೆಸರುಯುಕ್ತ, ಕುಡಿಯಲು ಯೋಗ್ಯವಲ್ಲದ ನೀರು ಬರುತ್ತಿರುವ ಕಾರಣ ಬಳಸಲು ಹಿಂದೇಟು ಹಾಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಇನ್ನು ಕುಂದುವಾಡ ಕೆರೆ, ಟಿ.ವಿ ಸ್ಟೇಷನ್ ನಲ್ಲಿ ನೀರು ಸಂಗ್ರಹ ಮಾಡಿದ್ದರೆ, ಈ ಸಮಸ್ಯೆ ತಲೆದೋರುತ್ತಿರಲಿಲ್ಲ. ಇದುವರೆಗೂ ಕೆರೆ ಕಾಮಗಾರಿ ಮುಗಿದಿಲ್ಲ. ಬರೋಬ್ಬರಿ 13 ಕೋಟಿ ರೂಪಾಯಿಗೂ ಅಧಿಕ ಹಣ ವ್ಯಯ ಮಾಡಲಾಗುತ್ತಿದ್ದರೂ ಜನರ ಬಳಕೆಗೆ ಬಂದಿಲ್ಲ. ಇದು ಸಹ ಕೊಳಚೆ ನೀರು ಬರಲು ಕಾರಣ. ಈ ಬಗ್ಗೆ ಗಂಭೀರವಾಗಿ ಪರಿಗಣಿಸದಿರುವುದಕ್ಕೆ ಜನರು ಸಿಟ್ಟಿಗೇಳುವಂತೆ ಮಾಡಲಾಗಿದೆ.

ಬೇರೆ ಕಡೆಗಳಿಂದ ಇಲ್ಲಿಗೆ ಬರುವವರು ಸಹ ಕೊಳಚೆ ನೀರು ನೋಡಿ ಬೇಸರಿಸಿಕೊಂಡು ವಾಪಸ್ ಹೋಗುತ್ತಿದ್ದಾರೆ. ಹವಾಮಾನ ಬದಲಾವಣೆ, ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜನರು ಕಷ್ಟ ಅನುಭವಿಸುತ್ತಿದ್ದಾರೆ. ಗಾಯದ ಮೇಲೆ ಬರೆ ಎಂಬಂತೆ ಇಂಥ ಅಶುದ್ಧ ನೀರಿನಿಂದಾಗಿ ಸಮಸ್ಯೆ ಅನುಭವಿಸುತ್ತಿದ್ದಾರೆ ಎಂದು ಹಲವು ಬಡಾವಣೆಗಳ ಜನರು ಹೇಳುತ್ತಿದ್ದಾರೆ.

ಸದ್ಯಕ್ಕೆ ನೀರಿನ ಸರಬರಾಜು ಇದೆಯಾದರೂ ಬಳಸಲು ಮಾತ್ರ ಆಗುತ್ತಿಲ್ಲ. ಮನೆಯಲ್ಲಿ ಪಾತ್ರೆ ತೊಳೆಯಲು ಆಗದಷ್ಟರ ಮಟ್ಟಿಗೆ ಕೊಳಕಾಗಿದೆ ನೀರು. ಈಗಲಾದರೂ ಪಾಲಿಕೆ ಆಡಳಿತ ವರ್ಗ ಹಾಗೂ ಅಧಿಕಾರಿಗಳು ಎಚ್ಚೆತ್ತುಕೊಂಡು ನೀರು ಸಂಸ್ಕರಿಸಿ, ಯೋಗ್ಯವಾದ ನೀರು ಪೂರೈಕೆ ಮಾಡಬೇಕೆಂದು ಜನರು ಆಗ್ರಹಿಸಿದ್ದಾರೆ.

ಇನ್ನು ಮಹಾನಗರ ಪಾಲಿಕೆಯ ಆಯುಕ್ತ ವಿಶ್ವನಾಥ್ ಮುದಜ್ಜಿ ಅವರೇ ಈ ಬಗ್ಗೆ ಆದೇಶ ಹೊರಡಿಸಿದ್ದು, ಕ್ಲೋರೋಫಾರಂನಿಂದ ನೀರು ಶುಚಿಗೊಳಿಸಿದರೂ ರೋಗ ರುಜಿನ ಬರುವ ಸಾಧ್ಯತೆ ಇರುವ ಕಾರಣದಿಂದ ಕಾಯ್ದಾರಿಸಿದ ನೀರು ಸೇವಿಸುವಂತೆ ಹೇಳಿದ್ದಾರೆ. ಪಾಲಿಕೆಯ ಆಡಳಿತ ವರ್ಗ ಮಾತ್ರ ಜನರ ಹಿತ ಕಾಪಾಡಲು ಮನಸ್ಸು ಮಾಡುತ್ತಿಲ್ಲ. ಇದು ಜನರ ಕೆಂಗಣ್ಣಿಗೂ ಗುರಿಯಾಗಿದೆ.

ಪ್ರತಿ ವರ್ಷ ಮಳೆಗಾಲದ ಆರಂಭದಲ್ಲಿಯೇ ಈ ಸಮಸ್ಯೆ ತಲೆದೋರುತ್ತೆ. ಕಲುಷಿತ ನೀರು ಪೂರೈಕೆ ಬಗ್ಗೆ ಎಲ್ಲೆಡೆಯಿಂದ ದೂರು ಕೇಳಿ ಬರುತ್ತಿವೆ. ಇಷ್ಟೊಂದು ಗಲೀಜು ನೀರು ನಲ್ಲಿಯಲ್ಲಿ ಬಂದಿದ್ದೇ ಗೊತ್ತಿಲ್ಲ. ಸ್ನಾನಕ್ಕೆ, ದಿನಬಳಕೆಗೂ ಯೋಗ್ಯವಾಗಿಲ್ಲ ಎಂದರೆ ಕುಡಿಯಲು ಬಳಸುವುದು ಹೇಗೆ? ಎಂಬ ಪ್ರಶ್ನೆ ಮಾಡುತ್ತಿದ್ದಾರೆ. ಇಷ್ಟೆಲ್ಲಾ ಸಮಸ್ಯೆ ಆಗುತ್ತಿರುವುದು ಗೊತ್ತಿದ್ದರೂ ಪಾಲಿಕೆಯಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ, ಶಾಸಕ ಎಸ್. ಎ. ರವೀಂದ್ರನಾಥ್, ಸಂಸದ ಜಿ. ಎಂ. ಸಿದ್ದೇಶ್ವರ ಗಮನ ಹರಿಸಿಲ್ಲ. ಕೂಡಲೇ ಸಂಸ್ಕರಿಸಿದ ನೀರು ನೀಡಲು ಕ್ರಮ ಕೈಗೊಳ್ಳಬೇಕು ಎಂದು ಗಡಿಗುಡಾಳ್ ಆಗ್ರಹಿಸಿದ್ದಾರೆ.

## ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ದಾವಣಗೆರೆ, ಆ. 9- ಸ್ವಾತಂತ್ರ್ಯದ ಅಮೃತ ಮಹೋತ್ಸವದ ವಿಶೇಷವಾಗಿ ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತಾಲ್ಲೂಕಿನಲ್ಲಿರುವ ಚನ್ನಗಿರಿ, ಸಂತೇಬೆನ್ನೂರು ಮತ್ತು ಬಸವಾಪಟ್ಟಣದಲ್ಲಿರುವ ಸರ್ಕಾರಿ ಪದವಿ ಕಾಲೇಜಿನ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಚನ್ನಗಿರಿ ಕಸಾಪ ಅಧ್ಯಕ್ಷ ಎಲ್.ಜಿ. ಮಧುಕುಮಾರ್ ತಿಳಿಸಿದ್ದಾರೆ.

'ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕನ್ನಡಿಗರ ಪಾತ್ರ' ಹಾಗೂ 'ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮಕ್ಕೆ ಯುವಜನತೆಯ ಸಿದ್ದತೆ' ಈ ವಿಷಯಗಳ ಬಗ್ಗೆ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9448786664 ಸಂಪರ್ಕಿಸಲು ಕೋರಿದ್ದಾರೆ.

## ದಾವಣಗೆರೆ ಅರ್ಬನ್ ಬ್ಯಾಂಕಿನ ವ್ಯವಸ್ಥಾಪಕರಾದ ಜಯಶೀಲ ನಿವೃತ್ತಿ



ದಾವಣಗೆರೆ, ಆ.9- ನಗರದ ದಾವಣಗೆರೆ ಅರ್ಬನ್ ಕೋ-ಆಪ್ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿದ್ದ ಶ್ರೀಮತಿ ಎಂ.ಎಂ.ಜಯಶೀಲ ಅವರು ಸುದೀರ್ಘ ಸೇವೆ ಸಲ್ಲಿಸಿ, ವಯೋ ನಿವೃತ್ತಿ ಹೊಂದಿದರು. ಬ್ಯಾಂಕಿನ ಮುಖ್ಯಕಛೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಅವರನ್ನು ಬೀಳ್ಕೊಡಲಾಯಿತು.

ಅಧ್ಯಕ್ಷತೆಯನ್ನು ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ್ ವಹಿಸಿದ್ದರು. ಉಪ ಪ್ರಧಾನ ವ್ಯವಸ್ಥಾಪಕ ಬಿ.ಎಸ್.ಮಲ್ಲೇಶ್ ಉಪಸ್ಥಿತರಿದ್ದರು. ಸಿಬ್ಬಂದಿಗಳಾದ ಶ್ರೀಮತಿ ಎಲ್.ಎಸ್.ಗೀತಾ, ಆರ್.ಎ. ಪ್ರಸನ್ನ, ಕೆ.ಬಿ. ಸದಾನಂದ, ಗಣೇಶ್, ಹೆಚ್.ವಿ.ರುದ್ರೇಶ್, ಜಿ.ಕೆ.ವಿಜಯಕುಮಾರ್, ಟಿ.ಎಚ್. ಎಂ.ಮಂಜುನಾಥ್, ಎನ್.ಕರಿಬಸಪ್ಪ, ಡಿ.ಶಿವರುದ್ರಪ್ಪ ಅವರುಗಳು ಮಾತನಾಡಿ, ಜಯಶೀಲ ಅವರ ಸೇವೆಯನ್ನು ಸ್ಮರಿಸಿದರು. ಶ್ರೀಮತಿ ಡಿ.ಇ.ಸಿಂಧೂ ಪ್ರಾರ್ಥಿಸಿದರು. ಹೆಚ್.ವಿ.ರುದ್ರೇಶ್ ಸ್ವಾಗತಿಸಿದರು. ಜಿ.ಕೆ. ವಿಜಯಕುಮಾರ್ ವಂದಿಸಿದರು. ಶ್ರೀಮತಿ ಕೆ.ಎಸ್.ಶಿಲ್ಪ ನಿರೂಪಿಸಿದರು.

# ನಗರದಲ್ಲಿಂದು ಜಿವ್ಹೇಶ್ವರ ಸ್ವಾಮಿ ಜಯಂತಿ



ಸ್ವಕುಳಸಾಳಿ ಸಮಾಜದ ಆರಾಧ್ಯ ದೈವ ಭಗವಾನ್ ಶ್ರೀ ಜಿವ್ಹೇಶ್ವರ ಸ್ವಾಮಿಯ ಜಯಂತ್ಯೋತ್ಸವವು ಶ್ರೀ ವೀರ ಮದಕರಿ ನಾಯಕ ವೃತ್ತದ ಬಳಿಯಿರುವ ಶ್ರೀ ಜಿವ್ಹೇಶ್ವರ ಧ್ಯಾನ ಮಂದಿರದಲ್ಲಿ ಇಂದು ನಡೆಯಲಿದೆ ಎಂದು ಸಮಾಜದ ಪ್ರಧಾನ ಕಾರ್ಯದರ್ಶಿ ಧರ್ಮರಾಜ ವಿ. ಏಕಟೋಟೆ ತಿಳಿಸಿದ್ದಾರೆ.

ಸ್ವಕುಳಸಾಳಿ ಸಮಾಜದ ವತಿಯಿಂದ ಈ ಕಾರ್ಯಕ್ರಮ ಏರ್ಪಾಡಾಗಿದ್ದು, ಪ್ರಾತಃಕಾಲ 6.30 ರಿಂದ ಶ್ರೀ ಜಿಹ್ವೇಶ್ವರ ಸ್ವಾಮಿಯ ಪೂಜಾ ವಿಧಿ-ವಿಧಾನಗಳು ಆರಂಭವಾಗಲಿದ್ದು, ತೊಟ್ಟಿಲು ಮತ್ತು ಉಡಿ ತುಂಬುವ ಕಾರ್ಯಕ್ರಮದ ನಂತರ ಬೆಳಿಗ್ಗೆ 9.30ಕ್ಕೆ ಶ್ರೀ ಸ್ವಾಮಿಯ ಭಾವಚಿತ್ರದ ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಲಿದೆ ಎಂದು ಉಪಾಧ್ಯಕ್ಷ ಸುರೇಂದ್ರ ವಾಂಜ್ರೆ ಹೇಳಿದ್ದಾರೆ. ನಂತರ ಬೆಳಿಗ್ಗೆ 11 ಗಂಟೆಗೆ ಆಯೋಜನೆಗೊಂಡಿರುವ ಸಭಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀ ಜಡೇಸಿದ್ದ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ ಮತ್ತು ಅಧ್ಯಕ್ಷತೆಯನ್ನು ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಮೋಹನ್ ಪಿ. ಗಾಯಕವಾಡ ವಹಿಸುವರು. ಸಮಾಜದ ಹಿರಿಯರಾದ ಹನುಮಂತಪ್ಪ ಕ್ಷೀರಸಾಗರ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವರು ಎಂದು ಖಜಾಂಚಿ ಗಣೇಶ ಪಿ. ಕ್ಷೀರಸಾಗರ ತಿಳಿಸಿದ್ದಾರೆ.

## ಡಿಆರ್‌ಆರ್ ಕಾಲೇಜಿನಲ್ಲಿ ಇಂದು

ಡಿಆರ್‌ಆರ್ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ವಿದ್ಯಾರ್ಥಿ ಸಂಘ ಹಾಗೂ ಕ್ರೀಡಾ ಸಂಘದ ಸಮಾರೋಪ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳು : ಎಸ್.ಎ.ರವೀಂದ್ರನಾಥ್, ರವೀಂದ್ರ ಬಿ. ಮಲ್ಲಾಪುರ, ಸೈಯದ್ ಸಾಧಿಕ್‌ವುಲ್ಲಾ, ಸೈಯದ್ ಸಾಧಿಕ್‌ವುಲ್ಲಾ. ಅಧ್ಯಕ್ಷತೆ : ಹೆಚ್.ಕೆ. ಮಂಜಪ್ಪ.


ಮಲ್ಲಿಕಾರ್ಜುನ ಪ್ಯಾಕೇಜ್ ಟೂರ್ಸ್

ಬಟವಾಡಿ ವೃತ್ತ, ತುಮಕೂರು
ಫೋ: 84960 44942, 82774 09101

ಸುಖಕರ ಪ್ರವಾಸ
Fixed departure
ಗುಜರಾತ್ ವಿಮಾನ ಪ್ರವಾಸ:
3-9-2022 ಸರ್ದಾರ್ ಪಟೇಲ್ ಪ್ರತಿಮೆ, ಸರ್ದಾರ್ ಡ್ಯಾಂ, ನಿಷ್ಕಳಂಕ ಮಹಾದೇವ, ಸೋಮನಾಥ, ನಾಗೇಶ್ವರ, ಬೇಟ್ ದ್ವಾರಕ, ದ್ವಾರಕ, ಪೋರ್ ಬಂದರ್, ಗಾಂಧಿ ನಗರ ಅಕ್ಷರ ಧಾಮ, ಅಹಮದಾಬಾದ್ ಸಬರಮತಿ ಆಶ್ರಮ, ರಾಣಿ, ಕ ವಾ.
ರೂ. 29500/- 7 ದಿನಗಳು.

Fixed departure
11-10-2022 ಕಾಶಿ, ದೆಹಲಿ ರೈಲು ಪ್ರವಾಸ: ಅಯೋಧ್ಯೆ, ಚಿತ್ರಕೂಟ, ಆಗ್ರ, ಮಥುರ, ಕಾಶಿ, ದೆಹಲಿ, ಪ್ರಯಾಗ್ ರಾಜ್ (ತ್ರಿವೇಣಿಸಂಗಮ ಪುಣ್ಯ ಸ್ನಾನ). ಸಾರಾನಾಥ್.
ರೂ.20500/- 12 ದಿನಗಳು

(ಎಲ್ಲ ಪ್ರವಾಸಕ್ಕೂ ಕಾಫಿ, ತಿಂಡಿ, ಮಿನರಲ್ ವಾಟರ್, ಊಟ, ಡೀಲಕ್ಸ್ ರೂಂ ವಸತಿ, ಪ್ರಯಾಣ ವೆಚ್ಚ ಸೇರಿದೆ)



ಜನ್ಮದಿನದ ಶುಭಾಶಯಗಳು



ಇಂದು (ದಿ. 10.08.2022)
ತಮ್ಮ ಜನ್ಮ ದಿನವನ್ನು ಸೇವಾ ಕಾರ್ಯಗಳೊಡನೆ ಆಚರಿಸಿಕೊಳ್ಳುತ್ತಿರುವ ದೈವಭಕ್ತ, ಸ್ನೇಹಜೀವಿ, ಸಂಘಟನಾ ಚತುರ, ಸೇವಾ ನಿರತ

ಲ|| ವಾಸುದೇವ ರಾಯ್ಕರ್

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.
ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷರು, ಜಿಲ್ಲಾ ಯೋಗ ಒಕ್ಕೂಟ, ಸಿನಿಮಾ ಸಿರಿ, ಕರ್ನಾಟಕ ರಕ್ಷಣಾ ವೇದಿಕೆ, ಆರ್ಟ್ ಆಫ್ ಲಿವಿಂಗ್, ದೈವಜ್ಞ ಕ್ರೆಡಿಟ್ ಕೋ-ಆಪ್. ಸೊಸೈಟಿ ಹೀಗೆ 40ಕ್ಕೂ ಹೆಚ್ಚು ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ ರಾಯ್ಕರ್ ಅವರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ, ಸುಖ-ಶಾಂತಿ, ನೆಮ್ಮದಿ ನೀಡಲೆಂದು ಶುಭ ಹಾರೈಸುವ,

ಅಂತರಾಷ್ಟ್ರೀಯ ಯೋಗಪಟು, ಯೋಗಾಚಾರ್ಯ
ಎನ್. ಪರಶುರಾಮ್
ಮಾಲೀಕರು, ದರ್ಶನ್ ಸೋಲಾರ್ & ಎಲೆಕ್ಟ್ರಿಕಲ್ಸ್
ಸಂಸ್ಥಾಪಕ ಕಾರ್ಯದರ್ಶಿಗಳು, SASS ಯೋಗ ಫೆಡರೇಷನ್,
BIET ಕಾಲೇಜ್ ರೋಡ್, ದಾವಣಗೆರೆ.

# ಹರಿಹರ : ಬೆಂಗಳೂರಿನಲ್ಲಿ ನಿವೇಶನ ಹಂಚುವುದಾಗಿ ಗೃಹ ಮಂಡಳಿ ಪ್ರಕಟಣೆ



## ಸಾರ್ವಜನಿಕರಿಂದ ಆಕ್ರೋಶ

ಹರಿಹರ, ಆ.9 - ನಗರದ ಹೊರವಲಯದ ಶೇರಾಪುರ ಬಡಾವಣೆಯಲ್ಲಿ ಕರ್ನಾಟಕ ಗೃಹ ಮಂಡಳಿಯ ವತಿಯಿಂದ ನಿರ್ಮಾಣ ಮಾಡಲಾದ ವಸತಿ ನಿವೇಶನದ ಹಂಚಿಕೆಯ ಲಾಟರಿಯನ್ನು ಬೆಂಗಳೂರು ನಗರದಲ್ಲಿ ಮಾಡಲಾಗುವುದು ಎಂದು ಗೃಹ ಮಂಡಳಿ ಪ್ರಕಟಿಸಿ ರುವುದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ರಾಜ್ಯ ಗೃಹ ಮಂಡಳಿಯ ವತಿಯಿಂದ ನಗರದ ಶೇರಾಪುರ ಬಡಾವಣೆಯಲ್ಲಿ 500 ಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿಕೆ ಮಾಡಲು ಎಲ್ಲಾ ರೀತಿಯ ಸಿದ್ದತೆ ಮಾಡಲಾಗಿದೆ. ಶೇರಾಪುರದಲ್ಲಿ ಆಗಸ್ಟ್ 17ರಂದು ಇ-ಲಾಟರಿ ನಡೆಸಲಾಗುವುದು ಎಂದು ತಿಳಿಸಲಾಗಿತ್ತು. ಆದರೆ, ನಂತರದಲ್ಲಿ ಪ್ರಕಟಣೆಯೊಂದನ್ನು ಹೊರಡಿಸಿರುವ ಗೃಹ ಮಂಡಳಿ, ಇ-ಲಾಟರಿಯನ್ನು ಬೆಂಗಳೂರಿನ ಗೃಹ ಮಂಡಳಿ ಕೇಂದ್ರ ಕಚೇರಿಯಲ್ಲಿ ನಡೆಸುವುದಾಗಿ ತಿಳಿಸಿದೆ.

ನಗರದಲ್ಲಿ ಹಿಂದೆ ಅಮರಾವತಿ ಬಳಿ ಕೆ.ಹೆಚ್.ಬಿ. ವಸತಿ ನಿವೇಶನ ಹಂಚಿಕೆ ಮಾಡಿದಾಗ, ಸ್ಥಳದಲ್ಲೇ ಫಲಾನುಭವಿಗಳಿಗೆ ನಿವೇಶನಗಳನ್ನು ನೀಡಲಾಗಿತ್ತು. ಅದರಂತೆ ಶೇರಾಪುರ ಬಡಾವಣೆಯ ನಿವೇಶನ ಹಂಚಿಕೆಯನ್ನು ಸ್ಥಳೀಯವಾಗಿ ಮಾಡಬೇಕು. ಇಲ್ಲದಿದ್ದರೆ ಪ್ರತಿಭಟನೆ ನಡೆಸುವುದಾಗಿ ಸಾರ್ವಜನಿಕರು ಹೇಳಿದ್ದಾರೆ.

ಬೆಂಗಳೂರು ನಗರದಲ್ಲಿ ಇ-ಹರಾಜು ಮಾಡುತ್ತಿರುವುದರ ಹಿಂದೆ ದುರುದ್ದೇಶವಿದೆ ಎಂಬ ಅನುಮಾನವೂ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ.

# ವಿದ್ಯುತ್ ಓವರ್ ಲೋಡ್: ಕೆಲವು ಮನೆಗಳಲ್ಲಿ ಹಾನಿ


ದಾವಣಗೆರೆ, ಆ. 9- ವಿದ್ಯುತ್ ಓವರ್ ಲೋಡ್‌ನಿಂದಾಗಿ ಕೆಟಿಜೆ ನಗರದ 2 ನೇ ಮೇನ್ 7 ಮತ್ತು 8 ನೇ ಕ್ರಾಸ್‌ಗಳಲ್ಲಿ ಕೆಲವು ಮನೆಗಳಲ್ಲಿ ಟಿ.ವಿ., ವಾಷಿಂಗ್ ಮಿಷನ್, ಸೆಟ್‌ಟಾಪ್ ಬಾಕ್ಸ್, ಮೊಬೈಲ್ ಚಾರ್ಜರ್, ಮಿಕ್ಸರ್ ಸೇರಿದಂತೆ ಅನೇಕ ವಸ್ತುಗಳು ಸುಟ್ಟಿರುವುದಾಗಿ ಕೆಟಿಜೆ ನಗರ ನಿವಾಸಿ ಹೆಲ್ಪ್‌ಲೈನ್ ಸುಭಾನ್ ತಿಳಿಸಿದ್ದಾರೆ.

ಬೆಸ್ಕಾಂ ನಿರ್ಲಕ್ಷ್ಯದಿಂದಾಗಿ ಇಂತಹ ಅವಘಡಗಳು ಸಂಭವಿಸುತ್ತಿದ್ದು, ಅಧಿಕಾರಿಗಳು ಗಮನಹರಿಸಿ ಸಮಸ್ಯೆ ಬಗೆಹರಿಸುವಲ್ಲಿ ಮುಂದಾಗಬೇಕೆಂದು ಮನವಿ ಮಾಡಿದ್ದಾರೆ.

ಪ್ರತಿ ತಿಂಗಳು ವಿದ್ಯುತ್ ಬಿಲ್ ಮಾತ್ರ ನಿಗದಿತ ದಿನಾಂಕಕ್ಕೆ ಪಾವತಿ ಮಾಡಲೇಬೇಕು. ಆದರೆ ಈ ರೀತಿ ಅವಘಡಗಳು ಸಂಭವಿಸಿದರೆ ತಕ್ಷಣ ಸ್ಪಂದಿಸಿ ಸರಿಪಡಿಸಲು ಇಲಾಖೆ ಮುಂದಾಗದಿರುವುದು ವಿಷಾದದ ಸಂಗತಿ ಎಂದವರು ಹೇಳಿದ್ದಾರೆ.

# ನಗರದಲ್ಲಿ ನಾಳೆಯಿಂದ ಗುರುರಾಯರ 351ನೇ ಆರಾಧನೆ

ದಾವಣಗೆರೆ, ಆ.9- ನಾಡಿದ್ದು ದಿನಾಂಕ 11 ರ ಗುರುವಾರ ಸಂಜೆಯಿಂದ ದಿನಾಂಕ 14 ರ ಭಾನುವಾರದವರೆಗೆ ನಗರದ ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀ ಗುರು ರಾಯರ 351ನೇ ಆರಾಧನೆ ನಡೆಯಲಿದೆ.



ನಾಡಿದ್ದು ದಿನಾಂಕ 11 ರ ಗುರುವಾರ ಸಂಜೆ 5ಕ್ಕೆ ಗೋ ಪೂಜೆ, ಧ್ವಜಾರೋಹಣ, ಧಾನ್ಯ ಪೂಜೆ, ಲಕ್ಷ್ಮಿ ಪೂಜೆ, ಪ್ರಾಕಾರ ರಥೋತ್ಸವದಿಂದ ಪ್ರಾರಂಭವಾಗುವುದು. ದಿನಾಂಕ 12 ಮತ್ತು 13 ರಂದು ಪ್ರಾತಃಕಾಲ ಸುಪ್ರಭಾತ, ಪಂಚಾಮೃತ ಅಭಿ ಷೇಕ, ಅಷ್ಟೋತ್ತರ ಪಾರಾಯಣ, ಸಂಜೆ ಪ್ರಾಕಾರ ರಥೋತ್ಸವ ಅಷ್ಟಾವಧಾನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯ ಲಿವೆ. ದಿನಾಂಕ 14 ರ ಭಾನುವಾರ ಉತ್ತರಾರಾಧನೆ ಪ್ರಯುಕ್ತ ಬೆಳಿಗ್ಗೆ 10.30 ರಿಂದ ರಾಜಬೀದಿಗಳಲ್ಲಿ ವೇದ, ವಾದ್ಯ, ಭಜನೆ, ನಾದಸ್ವರ ಹಾಗು ಗುರುಸಾರ್ವಭೌಮರ ಮಹಾರಥೋತ್ಸವ ನಡೆಯಲಿದೆ.

# ವಿದೇಶ ಪ್ರಯಾಣಿಕರಿಗೆ ಲಸಿಕೆ ಪ್ರಮಾಣ ಪತ್ರ ಕೈ ಬಿಡಲು ಪರಿಶೀಲನೆ

ನವದೆಹಲಿ, ಆ. 9 – ವಿದೇಶದಿಂದ ಬರುವ ಪ್ರಯಾಣಿಕರು ತಮ್ಮ ಕೊರೊನಾ ಲಸಿಕೆ ಪ್ರಮಾಣ ಪತ್ರ ಇಲ್ಲವೇ ಆರ್.ಟಿ. - ಪಿ.ಸಿ.ಆರ್. ನೆಗೆಟಿವ್ ವರದಿಯನ್ನು ಏರ್ ಸುವಿಧಾ ಪೋರ್ಟಲ್‌ನಲ್ಲಿ ದಾಖಲಿಸುವುದನ್ನು ಕೈ ಬಿಡಲು ಸರ್ಕಾರ ಪರಿಶೀಲಿಸುತ್ತಿದೆ. ಆದರೆ, ಆನ್‌ಲೈನ್ ಪೋರ್ಟಲ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳುವ ಈಗಿನ ಪದ್ಧತಿ ಮುಂದುವರೆಯಲಿದೆ. ಈ ಪೋರ್ಟಲ್ ಆಗಾಗ ಕಾರ್ಯ ನಿರ್ವಹಿಸುವುದಿಲ್ಲ. ಫಾರಂಗಳನ್ನು ಪಡೆಯುವುದು ಹಾಗೂ ಪ್ರಮಾಣ ಪತ್ರಗಳನ್ನು ಅಪ್‌ಲೋಡ್ ಮಾಡುವುದು ಕಠಿಣವಾಗುತ್ತಿದೆ ಎಂದು ಪ್ರಯಾಣಿಕರು ದೂರುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೊರೊನಾ ಲಸಿಕೆ ಇಲ್ಲವೇ ಆರ್.ಟಿ. - ಪಿ.ಸಿ.ಆರ್. ನೆಗೆಟಿವ್ ವರದಿಯನ್ನು ಅಪ್‌ಲೋಡ್ ಮಾಡುವ ಪದ್ಧತಿ ಕೈ ಬಿಡುವಂತೆ ಕೇಂದ್ರ ನಾಗರಿಕ ವಿಮಾನಯಾನ ಇಲಾಖೆಯು ಕೇಳಿತ್ತು. ಇದಕ್ಕೆ ಆರೋಗ್ಯ ಸಚಿವಾಲಯ ಶೀಘ್ರದಲ್ಲೇ ಅನುಮತಿ ನೀಡುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಅಂತರರಾಷ್ಟ್ರೀಯ ವಿಮಾನಯಾನ ಈಗ ಕೊರೊನಾಗೆ ಮೊದಲಿನ ಪರಿಸ್ಥಿತಿಗೆ ಮರಳುತ್ತಿದೆ. ಹಲವಾರು ದೇಶಗಳು ಪ್ರಯಾಣದ ಮೇಲಿನ ನಿರ್ಬಂಧಗಳನ್ನು ಸಡಿಲಿಸುತ್ತಿವೆ.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ರಾಣೇಬೆನ್ನೂರು ತಾಲ್ಲೂಕಿನ ಕೋಡಿಯಾಲ, ಹೊಸಪೇಟೆ, ಕವಲೆತ್ತು, ನಲವಾಗಲು, ಮಾಕನೂರು, ರಾಜನಹಳ್ಳಿ, ನದಿಹರಳಹಳ್ಳಿ, ವಡೇರಹಳ್ಳಿ ಇಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಇರುವುದಿಲ್ಲ.

WANTED
B.Com, M.Com Graduator
Minimum - 3 years Experience
Contact :
70220 04042 99806 29965

ಭಾವಪೂರ್ಣ ಶ್ರದ್ಧಾಂಜಲಿ




ಸ್ವಾತಂತ್ರ್ಯ ಹೋರಾಟಗಾರರೂ, ದಿ ದಾವಣಗೆರೆ ಮರ್ಚೆಂಟ್ಸ್ ಕ್ಲಬ್ ಆಜೀವ ಸದಸ್ಯರೂ, ಶ್ರೀ ರೇವಣಸಿದ್ದೇಶ್ವರ ಅಂಡ್ ಕೋ ವರ್ತಕರೂ, ಹಿರಿಯ ಮುತ್ಸದ್ದಿಗಳೂ ಆದ
ಕರೇಶಿವಪ್ಪರ ರೇವಣಸಿದ್ದಪ್ಪನವರು
ದಿನಾಂಕ : 02.08.2022ರಂದು ಲಿಂಗೈಕ್ಯರಾಗಿದ್ದು, ಶ್ರೀಯುತರಿಗೆ ಭಾವಪೂರ್ಣ ಶ್ರದ್ಧಾಂಜಲಿ...
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ...
ಅಧ್ಯಕ್ಷರು, ಉಪಾಧ್ಯಕ್ಷರು
ಮತ್ತು ಆಡಳಿತ ಮಂಡಳಿ ಹಾಗೂ ಸರ್ವ ಸದಸ್ಯರು
ದಿ ದಾವಣಗೆರೆ ಮರ್ಚೆಂಟ್ಸ್ ಕ್ಲಬ್
ದಾವಣಗೆರೆ.



49 ನೇ ಜನ್ಮದಿನದ ಶುಭಾಶಯಗಳು
ಹಸನ್ಮುಖಿ, ಸದಾಸುಖಿ, ವೃತ್ತಿಯಲ್ಲಿ ಬೆಳ್ಳಿ-ಬಂಗಾರಗಳ ಸಹವಾಸ. ಪ್ರವೃತ್ತಿಯಲ್ಲಿ ವಜ್ರ-ವೈಢೂರ್ಯಗಳಂತಹ ಕಾರ್ಯಕ್ರಮ ಆಯೋಜನೆಯ ಹವ್ಯಾಸ, ಪ್ರೀತಿ, ಆತ್ಮೀಯತೆ, ಆತಿಥ್ಯದ ಸಾರಥಿ... ಮುಗುಳು ನಗೆಯಲ್ಲೇ ಸ್ನೇಹದ ಕಂಪು ಸೂಸುವ ಸ್ನೇಹ ಜೀವಿ... 47 ಸಂಘ- ಸಂಸ್ಥೆಗಳಲ್ಲಿ ಸಹಭಾಗಿಯಾದ ಸಂಘಟನಾ ಚತುರ... 48 ಬಾರಿ ರಕ್ತ ದಾನವಿತ್ತ ಜೀವನ್ಮುಖಿ... ಇವರಿಗನುದಿನ ಬೇಕು ಯೋಗಾಸನದ ಒಕ್ಕೂಟ, ಸೇವೆಯಲ್ಲಿ ಇವರು ಸದಾ ಮುಂದು, ಜನರಲ್ಲಿ ಬೆರೆಯುವ ಇವರಿಗೆ ಎಲ್ಲರೂ ಬಂಧು, ಕಾಮಾಕ್ಷಿ ಕುಲಪುರುಷ ದೇವಸ್ಥಾನಕ್ಕೆವರದು ಕೊಡುಗೈ, ಸಮಷ್ಟಿ ಹಿತದ ಕೆಲಸಗಳಿಗೆ ಇವರು ಬಲಗೈ, ಶ್ರಾವಣ ಪುಣ್ಯ ಮಾಸದಲ್ಲಿ ಜನ್ಮವೆತ್ತ ನಗುಮೊಗದ ಸ್ನೇಹಜೀವಿ, ಸಂಘಟನಾ ಚಾಣಕ್ಯ, ವಿಶಾಲ ಹೃದಯಿ
ಶ್ರೀ ವಾಸುದೇವ ರಾಯ್ಕರ್ ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.
ಲಯನ್ಸ್ ಜಿಲ್ಲೆ 317-ಸಿ ಯೋಗ ಮತ್ತು ರಕ್ತದಾನದ ಜಿಲ್ಲಾ ಸಂಯೋಜಕರಾದ ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ, ಸಿನಿಮಾ ಸಿರಿ, ಕರ್ನಾಟಕ ರಕ್ಷಣಾ ವೇದಿಕೆ, ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ, ಆರ್ಟ್ ಆಫ್ ಲಿವಿಂಗ್ ಮುಂತಾದ ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ ನಮ್ಮೆಲ್ಲರ ಸನ್ಮಿತ್ರ ರಾಯ್ಕರ್ ಅವರಿಗೆ ಭಗವಂತನು ಆಯುರಾರೋಗ್ಯ, ಐಶ್ವರ್ಯ ಕೊಡಲೆಂದು ಹಾರೈಸುವ...
ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ.), ದಾವಣಗೆರೆ.



60 ಜನ್ಮದಿನದ ಶುಭಾಶಯಗಳು
ದಿನಾಂಕ : 10.08.2022 ರಂದು ತಮ್ಮ 60ನೇ ವರ್ಷದ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ ಅಖಿಲ ಭಾರತ ಜಂಗಮ ಮಹಾಸಭಾದ ದಾವಣಗೆರೆ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರೂ, ಸಾಮಾಜಿಕ ಸೇವಾ ಕಾರ್ಯಕರ್ತರೂ, ನಮ್ಮ ನೆಚ್ಚಿನ ಹಿರಿಯರೂ ಆದ
ಶ್ರೀಮತಿ ದ್ರಾಕ್ಷಾಯಣಮ್ಮ
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.
ಇವರಿಗೆ ಆಯುರಾರೋಗ್ಯ ಭಾಗ್ಯ ನೀಡಲೆಂದು ಭಗವಂತನಲ್ಲಿ ಪ್ರಾರ್ಥನೆ.






ಶ್ರೀಮತಿ ವಸುಂಧರಾ. ಜಿ.ಸಿ. ವಕೀಲರು, ದಾವಣಗೆರೆ,
ಶ್ರೀಮತಿ ಚಂದ್ರಮ್ಮ ಅಖಿಲ ಭಾರತ ಜಂಗಮ ಮಹಾಸಭಾ ದಾವಣಗೆರೆ.
ಶ್ರೀಮತಿ ಶಶಿಕಲಾ ದಾವಣಗೆರೆ.
ಶ್ರೀಮತಿ ರಾಜೇಶ್ವರಿ ದಾವಣಗೆರೆ.
ಹಾಗೂ ಎಲ್ಲಾ ಸ್ನೇಹಿತರು ಹಾಗೂ ಕುಟುಂಬದವರು

60 ಜನ್ಮದಿನದ ಶುಭಾಶಯಗಳು




ಇಂದು ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ ಕಾಂಗ್ರೆಸ್ ಮುಖಂಡರು, ಜಿಲ್ಲಾ ಅಧ್ಯಕ್ಷರು ಅಖಿಲ ಭಾರತ ಜಂಗಮ ಮಹಾಸಭಾ, ರಾಜ್ಯಾಧ್ಯಕ್ಷರು ಕನ್ನಡ ಸಮರ ಸೇನೆ, ಕನ್ನಡ ಪರ ಒಕ್ಕೂಟದ ಗೌರವ ಅಧ್ಯಕ್ಷರಾದ
ಶ್ರೀಮತಿ ದ್ರಾಕ್ಷಾಯಣಮ್ಮ ಮಲ್ಲಿಕಾರ್ಜುನಯ್ಯ ಟಿ.ಎಂ. ಇವರು
ಇವರಿಗೆ ಹಾರ್ದಿಕ ಶುಭಾಶಯಗಳು...
ಇವರಿಗೆ ಆಯುರಾರೋಗ್ಯ ಭಾಗ್ಯ ನೀಡಲೆಂದು ಭಗವಂತನದಲ್ಲಿ ಪ್ರಾರ್ಥನೆ.
ಶುಭ ಕೋರುವವರು :
+ ಜೀವರಾಜಯ್ಯ ಟಿ.ಎಂ., ಬೆಸ್ಕಾಂ + ದೀಪಾ ಟಿ.ಎಂ.
+ ರಾಜೇಶ್ವರಿ ಟಿ.ಎಂ., ಉತ್ತರ ವಲಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷರು
+ ಉಮೇಶಯ್ಯ., ಕೆಎಸ್‌ಆರ್‌ಟಿಸಿ
+ ಶಾಂತಯ್ಯ ಟಿ.ಎಂ.., ಬಿಐಇಟಿ
+ ಮೇಘ ಟಿ.ಎಂ. + ಶಿವಯ್ಯ ಟಿ.ಎಂ. + ರಂಜಿತಾ ಟಿ.ಎಂ.
+ ಶ್ರೀಮತಿ ಯಶೋದ, ಜನತಾವಾಣಿ
ಮೊಮ್ಮಕ್ಕಳು : + ದುರ್ಗಾಶ್ರೀ + ಕಾರ್ತಿಕಯ್ಯ
+ ಸೋಮಶೇಖರಯ್ಯ + ಕಾಂಚನ + ಸಿದ್ಧಾಂತಯ್ಯ
+ ತೇಜಸಯ್ಯ + ಅಮೃತ
ತುಂಬಿಗೆರೆ ಮಠಸ್ಥರು ಮತ್ತು ಕುಟುಂಬ ವರ್ಗ ಹಾಗೂ ಬಂಧು-ಮಿತ್ರರು

Shree Goutam Educational Trust
Jain Trinitiy Pre-University College
GD -0431
Jain Trinity Business School
ADMISSIONS OPEN 2022-23
Bachelor of Business Administration (BBA)
Bachelor of Commerce (B.Com)
Why Jain Trinity College?
- Competent & Qualified Faculty with more than 15 Years of Experience
- Online Attendance of Students
- Holistic Development
- Student of the Year
- Continuous Student Academic Review
- Corporate Tie Ups -UnAcademic, Scaler, My Captain
- Placements - India & Foreign
- Industrial Visits & Tours
- Student Counselling and Mentoring
- Management Fests & Intra College Fests
- State of Art Library
- Indoor Games / Sports
- Jt Certificate Courses
- Strict & Discipline College Cultrure



Competitive Exams
CA, CS, UPSC, KPSC, BANK
Value Added Courses
Digital Marketing
Retail Management Advanced Excel
C-Programming





Sunil Kumar C
M.B.A., M.S., M.Phill.,
Chief Mentor
Management & Administration
Salim Malik A.R
M.Com., B.Ed., (M.B.A.)
Principal
JTPUC
Moksh V Chowhan
M.I.M (Australia) Director
Assistant Senior Manager,
UnAcademy, Scaler.
Address: #4244/A, 4th Main, 9th Cross, Behind Shah Apartment, S.S. Layout, B Block, Davanagere - 04
Contact: 96865 85741, 91466 79999, 74110 75584

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte